ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

# ಗ್ರಾಮೋದಯ



ತ್ರೈಮಾಸಿಕ ಪತ್ರಿಕೆ

| ಸಂಪುಟ-1 | ಸಂಚಿಕೆ-3 | ಜುಲೈ 2021 - ಸೆಪ್ಟೆಂಬರ್ 2021 | ಪುಟಗಳು-48 |
|---|---|---|---|
| Vol-1 | Issue-3 | July 2021 - September - 2021 | Pages-48 |


**NEP 2020**

National Education Policy is futuristic and as per global standard, aiming at empowering to student to take part in national development in line with the vision of Dr. S. Radhakrishnan. “India takes Pride in being the mother of democracy as its values are embodid in our way of life”.

**- PM Modi**






ರಾಷ್ಟ್ರೀಯ ಶಿಕ್ಷಣ ನೀತಿ – 2020ರ ಅಡಿಯಲ್ಲಿ ವಿಶ್ವವಿದ್ಯಾಲಯದ ಪದವಿ ಕೋರ್ಸ್‌ಗಳ
ಪಠ್ಯಕ್ರಮದ ವಿನ್ಯಾಸ ಹಾಗೂ ಅಭಿವೃದ್ಧಿ ಕಾರ್ಯಗಾರದ ಚಾಲನೆ




ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು
ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿರುವುದು



ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅಡಿಯಲ್ಲಿ ವಿಶ್ವವಿದ್ಯಾಲಯದ ಪದವಿ ಕೋರ್ಸ್‌ಗಳ
ಪಠ್ಯಕ್ರಮದ ವಿನ್ಯಾಸ ಹಾಗೂ ಅಭಿವೃದ್ಧಿ ಕಾರ್ಯಾಗಾರವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ

## ಈ ಸಂಚಿಕೆಯೊಳಗೆ
## 2021ನೇ ಜುಲೈನಿಂದ ಸೆಪ್ಟೆಂಬರ್ ವರೆಗೆ.....


| | | | |
|---|---|---|---|
| ಕುಲಪತಿಗಳ ನುಡಿ | – | ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ | – 5 |
| ಕುಲಸಚಿವರ ಆಶಯ | – | ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ | – 6 |
| ಹಣಕಾಸು ಅಧಿಕಾರಿಗಳ ಮನದಾಳದ ಮಾತು | – | ಶ್ರೀ. ಪ್ರಶಾಂತ್ ಜೆ. ಸಿ. | – 7 |
| ವಿಶೇಷ ಲೇಖನ<br>ಡಾ. ಪ್ರಕಾಶ್ ಭಟ್ | – | 'ಗ್ರಾಮಾಭಿವೃದ್ಧಿಯ ಸಂಸ್ಕಾರಗಳು' | – 8 |
| ವಿಶೇಷ ಕಾರ್ಯಾಗಾರ<br>ಡಾ. ಅಭಯಕುಮಾರ ಗಸ್ತಿ | – | ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮಗಳ ಪಠ್ಯಕ್ರಮ ವಿನ್ಯಾಸ ಹಾಗೂ ವಿಷಯ ಅಭಿವೃದ್ಧಿ ಕಾರ್ಯಾಗಾರ | – 12 |
| ವಿಶೇಷ ಲೇಖನ<br>ಡಾ. ಸಂತೋಷಕುಮಾರ ಪಿ. ಕೆ. | – | ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಉನ್ನತ ಶಿಕ್ಷಣ | – 16 |
| ವಿಶೇಷ ಸಮಾವೇಶ<br>ಶ್ರೀ ಆನಂದಗೌಡರ ಪಿ. ಫಕೀರಗೌಡ | – | ಗೋ ಆಧಾರಿತ ಸಾವಯವ ಕೃಷಿ "ಪ್ರಾತ್ಯಕ್ಷಿಕೆ ಮತ್ತು ಸಂವಾದ" ದೇಸಿ ಯೋಜನೆಯ ಒಂದು ವರ್ಷದ ಕಾರ್ಯಾಗಾರದ ನೋಟ | – 19 |
| ಸಾಧಕರ ಸಂದರ್ಶನ<br>ಶ್ರೀಮತಿ ಶಶಿಕಲಾ ಬಿ. ಹಳ್ಳಿಕೇರಿ | – | ಕೃಷಿ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಶ್ರೀಮತಿ ಸುನಂದಾ ಗದ್ದಿಕೇರಿ ಇವರೊಂದಿಗೆ | – 22 |
| ವಿಶೇಷ ಕಾರ್ಯಕ್ರಮಗಳು<br>Dr. Shashikant D. H. | – | Orientation on YUVA Entrepreneurship Program | – 24 |
| ಡಾ. ಅಭಯಕುಮಾರ ಗಸ್ತಿ | – | ಗ್ರಾಮೀಣ ಬದುಕಿನ ಅನುಭವ ಹಾಗೂ ಅಧ್ಯಯನ : ರೂರಲ್ ಇಮರ್ಶನ್ ಕಾರ್ಯಕ್ರಮ | – 26 |
| Article<br>Smt. Mangala V. Radder | – | "Advanced Certificate Course in Communication Skills for Personality Development and Employability" | – 29 |
| Article<br>Sri M. B. Channappagoudar | – | Excerpts from the book "SIGNIFICANCE OF GANDHI - AS A MAN & THINKER" by Dr. K. G. Saiyadian | – 33 |
| ವಿಶ್ವವಿದ್ಯಾಲಯದ ಚಟುವಟಿಕೆಗಳು | | | – 35 |



**ಸೂಚನೆ :**
ಲೇಖನಗಳನ್ನು ಪ್ರಕಟಣೆಗಾಗಿ ಆಯ್ಕೆ ಮಾಡುವ ಹಾಗೂ ಪ್ರಕಟಿಸುವ ಸೂಕ್ತ ಸಮಯದ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ.
ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸಂಪಾದಕ ಮಂಡಳಿಯ ಅಭಿಪ್ರಾಯವಲ್ಲ.
ಈ ಆವೃತ್ತಿಯು ಮಾರಾಟಕ್ಕಲ್ಲ ಫೋ : (08372) 297214, ಇಮೇಲ್ : gramodayaksrdpru@gmail.com

## ಸಂಪಾದಕೀಯ ಮಂಡಳಿ

ಅಧ್ಯಕ್ಷರು :

**ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ,**
ಕುಲಸಚಿವರು

ಪ್ರಧಾನ ಸಂಪಾದಕರು :

**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಸಹಾಯಕ ನಿರ್ದೇಶಕರು,
ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ

ಸಹ ಸಂಪಾದಕರು :

**ಡಾ. ಗೀತಾ ಎನ್. ಬಂಗಾರಿ**
ಎಂ.ಎಸ್.ಡಬ್ಲ್ಯು, ಕಾರ್ಯಕ್ರಮ ಸಂಯೋಜಕರು

ಸದಸ್ಯರುಗಳು :

**ಶ್ರೀ ಆನಂದಗೌಡ ಪಿ. ಫಕೀರಗೌಡ**
ಸಹಾಯಕ ಗ್ರಂಥಪಾಲಕರು

**ಶ್ರೀ ಪ್ರಶಾಂತ ಹೆಚ್. ಮೇರವಾಡೆ**
ಪ್ರಾಧ್ಯಾಪಕರು ಮತ್ತು ಮಾಧ್ಯಮ ಸಂಯೋಜಕರು

**ಶ್ರೀ ಗುರುದತ್ತ ರಾಯ್ಕರ**
ಪ್ರಾಜೆಕ್ಟ್ ಫೆಲೋ ಎಂ.ಕಾಂ. ವಿಭಾಗ

ಸದಸ್ಯ ಕಾರ್ಯದರ್ಶಿಗಳು :

**ಶ್ರೀಮತಿ ಶಶಿಕಲಾ ಬಿ. ಹಳ್ಳಿಕೇರಿ**

**ಕು. ರಾಧಿಕಾ ಕೆ. ಆರ್.**

ಸಲಹಾ ಮಂಡಳಿ :

**ಶ್ರೀ ಗಿರೀಶ್ ದೀಕ್ಷಿತ್**
ಸಹಾಯಕ ನಿರ್ದೇಶಕರು,
ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ

**ಶ್ರೀ ಎಂ. ಬಿ. ಚನ್ನಪ್ಪಗೌಡರ**
ಎಂ.ಬಿ.ಎ., ಕಾರ್ಯಕ್ರಮ ಸಂಯೋಜಕರು

**ಡಾ. ಅಭಯಕುಮಾರ ಗಸ್ತಿ**
ಎಂ.ಕಾಂ., ಕಾರ್ಯಕ್ರಮ ಸಂಯೋಜಕರು

**ಡಾ. ಶ್ರೀಧರ ಹಾದಿಮನಿ**
ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್,
ಕಾರ್ಯಕ್ರಮ ಸಂಯೋಜಕರು

**ಕು. ಫಕೀರಮ್ಮ ಪಿ. ಮುರಗೋಡ**
ಎಂ.ಎಸ್ಸಿ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ,
ಕಾರ್ಯಕ್ರಮ ಸಂಯೋಜಕರು

**ಶ್ರೀ ರಾಘವೇಂದ್ರ ಇಟ್ಟಂಗಿ**
ಎಂ.ಎಸ್ಸಿ. ಗಣಕ ವಿಜ್ಞಾನ, ಕಾರ್ಯಕ್ರಮ ಸಂಯೋಜಕರು

**ಶ್ರೀ ಸುರೇಶ ಲಮಾಣಿ**
ಎಂ.ಎಸ್ಸಿ. ಜಿಯೋಇನ್ಫಾರ್‌ಮೆಟಿಕ್ಸ್, ಕಾರ್ಯಕ್ರಮ ಸಂಯೋಜಕರು

**ಡಾ. ನಾಗವೇಣಿ ಎಸ್. ಜೆ.**
ಎಂ.ಪಿ.ಹೆಚ್., ಕಾರ್ಯಕ್ರಮ ಸಂಯೋಜಕರು

**ಡಾ. ಸಂಗನಗೌಡ ಪಾಟೀಲ**
ಎಂ.ಎ. ಅರ್ಥಶಾಸ್ತ್ರ, ಕಾರ್ಯಕ್ರಮ ಸಂಯೋಜಕರು

**ಶ್ರೀ ಪ್ರವೀಣ ಅಂಕಲಕೋಟಿ**
ಎಂ.ಎ. ಸಾರ್ವಜನಿಕ ಆಡಳಿತ,
ಕಾರ್ಯಕ್ರಮ ಸಂಯೋಜಕರು

**ಡಾ. ವೀರೇಶ್‌ಕುಮಾರ್ ವಿಜಾಪೂರ**
ಸಹಾಯಕ ನಿರ್ದೇಶಕರು, ದೈಹಿಕ ಶಿಕ್ಷಣ


# ಸಂಪಾದಕೀಯ...



ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ನಮ್ಮ ವಿಶ್ವವಿದ್ಯಾಲಯ ಪ್ರಾರಂಭವಾಗಿ ತನ್ನ ನಾಲ್ಕನೇ ಶೈಕ್ಷಣಿಕ ವರ್ಷವನ್ನು ಪೂರ್ಣಗೊಳಿಸಿರುವ ವಿಷಯವನ್ನು ತಿಳಿಸಲು ಹೆಮ್ಮೆ ಅನಿಸುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ–2020, ನಿರ್ದಿಷ್ಟವಾಗಿ ಮಹತ್ತರ ಬದಲಾವಣೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ತರುವ ಉದ್ದೇಶವನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು, ರಾಷ್ಟ್ರೀಯ ಶಿಕ್ಷಣ ನೀತಿ–2020 ರಲ್ಲಿ ಬಿಂಬಿಸಿರುವ ವಿಷಯಗಳನ್ನು ಉನ್ನತ ಶಿಕ್ಷಣ ಕೋರ್ಸುಗಳಲ್ಲಿ ಅಳವಡಿಸುವುದರೊಂದಿಗೆ, ಪದವಿ ಕೋರ್ಸುಗಳನ್ನು ಪ್ರಾರಂಭಿಸುವ ಮಹತ್ತರವಾದ ಹೆಜ್ಜೆಯನ್ನಿಟ್ಟಿರುತ್ತದೆ. ಈ ದಿಶೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಗಣ್ಯ ಮಾನ್ಯರೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾದ ಐದು ಪ್ರಮುಖ ಪದವಿ ಕೋರ್ಸುಗಳ ಬಗ್ಗೆ ಈ ಸಂಚಿಕೆಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ.

ವಿಶ್ವವಿದ್ಯಾಲಯದಿಂದ, ಸ್ನಾತಕೋತ್ತರ ಪದವಿ ಮುಕ್ತಾಯ ಗೊಳಿಸಿದವರನ್ನು, ಉದಯ ಪೂರ್ವದಲ್ಲಿ ಅವರಿಗೆ ಉದ್ಯೋಗಕ್ಕೆ ಅರ್ಹರನ್ನಾಗುವಂತೆ ಇನ್ನು ಹೆಚ್ಚಿನ ಸಾಮರ್ಥ್ಯ ನೀಡಲು ಹಲವಾರು ಕೌಶಲ್ಯ ವಿಕಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿರುವ ವಿಷಯ ವಿಶೇಷವಾಗಿದೆ.

ಮೂರನೇ ಬ್ಯಾಚ್‌ನ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳ ಸವಿನೆನಪು ಕಾರ್ಯಕ್ರಮ ಮನತುಂಬುವಂತಿದೆ. ಅವರ ಮುಂದಿನ ಜೀವನದಲ್ಲಿ ಬರುವ ಎಲ್ಲಾ ಸವಾಲುಗಳನ್ನು ಎದುರಿಸಿ ಒಬ್ಬ ಉತ್ತಮ ನಾಗರಿಕರಾಗಲೆಂದು ಹಾರೈಸುತ್ತೇನೆ.

ಪ್ರಸ್ತುತ 'ಗ್ರಾಮೋದಯ' ಸಂಚಿಕೆಯ ಸಂಕಲನಕ್ಕೆ ಅನುವು ಮಾಡಿಕೊಟ್ಟ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಗೆ, ಕುಲಸಚಿವರಿಗೆ, ವಿತ್ತಾಧಿಕಾರಿಗಳಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಪಾದಕೀಯ ಮಂಡಳಿ ಹಾಗೂ ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ, ಲೇಖಕರಿಗೆ ಹಾಗೂ ವಿನ್ಯಾಸ ರಚಿಸಿ ಮತ್ತು ಅಂದವಾಗಿ ಮುದ್ರಿಸಿದ ಮೆ॥ ಕಾಂಬಳೆ ಪ್ರಿಂಟರ್ಸ್, ಗದಗ ಇವರಿಗೆ ನಾನು ಚಿರಋಣಿಯಾಗಿದ್ದೇನೆ.

**ಡಾ. ಅಬ್ದುಲ್ ಅಜೀಜ್ ಮುಲ್ಲಾ**
**ಸಂಪಾದಕರು**

# ಕುಲಪತಿಗಳ ನುಡಿ



**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ "ಗ್ರಾಮೋದಯ" ತ್ರೈಮಾಸಿಕ ಪತ್ರಿಕೆಯ ಎರಡು ಆವೃತ್ತಿಗಳು ಹಾಗೂ ವಿಶೇಷ ಆವೃತ್ತಿ ಈಗಾಗಲೇ ಬಿಡುಗಡೆಗೊಂಡಿದ್ದು, ಮೂರನೇ ಸಂಚಿಕೆಯು ಪ್ರಕಟಣೆಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಗ್ರಾಮೋದಯ ಒಂದು ನಿರಂತರ ಪ್ರಕ್ರಿಯೆ. ವಿಶ್ವವಿದ್ಯಾಲಯವು ಈ ಕಾರ್ಯವನ್ನು ಯಶಸ್ವಿಗೊಳಿಸಲು ಅನೇಕ ಕಾರ್ಯಕ್ರಮಗಳು, ಚಟುವಟಿಕೆಗಳನ್ನು ಪ್ರಾರಂಭಿಸಿ ಬೆಳೆಸುವಂತ ದಿಕ್ಕಿನಲ್ಲಿ ಸಾಗುತ್ತಿದೆ. ವಿಶ್ವವಿದ್ಯಾಲಯದಿಂದ ಚಟುವಟಿಕೆಗಳನ್ನು ಕ್ರೋಢೀಕರಿಸಿ ಗ್ರಾಮೋದಯ ಮಾಸ ಪತ್ರಿಕೆಯು ತನ್ನ ಕಳೆದ ಎರಡು ಆವೃತ್ತಿಯಲ್ಲಿ ಸುಂದರವಾಗಿ ಮುದ್ರಣಗೊಳಿಸಿ ಜನಕ್ಕೆ ತಲುಪಿಸುವಂತ ಪ್ರಯತ್ನ ಮಾಡುತ್ತಿದೆ.

ಎಂದಿನಂತೆ ಈ ಆವೃತ್ತಿಯಲ್ಲಿ ಲೇಖನಗಳು, ಸಾಧಕರ ಸಂದರ್ಶನ, ವಿಶ್ವವಿದ್ಯಾಲಯದಲ್ಲಿ ನಡೆದ ಪ್ರಮುಖ ಚಟುವಟಿಕೆಗಳು, ಕಾರ್ಯಗಾರ ಹಾಗೂ ವೆಬಿನಾರ್‌ಗಳ ವಿವರವನ್ನು ಬಿಂಬಿಸಲಾಗಿದೆ.

ನಮ್ಮ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಭಾರತ ದೇಶದ ಮೂಲ ಉದ್ಯೋಗವಾದ ಕೃಷಿಯಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ **"ಗೋ ಆಧಾರಿತ ಸಾವಯವ ಕೃಷಿಯ ಪ್ರಾತಕ್ಷಿಕೆ ಮತ್ತು ಸಂವಾದ ಕಾರ್ಯಗಾರ'** ಹಾಗೂ 'ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಅಡಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾಗುತ್ತಿರುವ ಸ್ನಾತಕ ಪದವಿ ಕೋರ್ಸ್‌ಗಳಿಗೆ **ಪಠ್ಯ ವಿನ್ಯಾಸ ಮತ್ತು ಪಠ್ಯಕ್ರಮ ಅಭಿವೃದ್ಧಿ** ವಿಷಯದ ಕುರಿತ ಮೂರು ದಿನಗಳ ಕಾರ್ಯಗಾರ ಮತ್ತು ವಿಶ್ವವಿದ್ಯಾಲಯದ ಮೊದಲನೇ **"ಅಡ್ವಾನ್ಸಡ್ ಸರ್ಟಿಫಿಕೇಟ್ ಕೋರ್ಸ್ ಇನ್ ಕಮ್ಯೂನಿಕೇಶನ್ ಸ್ಕಿಲ್ಸ್ ಫಾರ್ ಪರ್ಸನಾಲಿಟಿ ಡೆವೆಲಪ್ಮೆಂಟ್ ಆ್ಯಂಡ್ ಎಂಪ್ಲಾಯಬಿಲಿಟಿ"** ಯ ಉದ್ಘಾಟನಾ ಸಮಾರಂಭ' ದ ಕುರಿತು ಈ ಆವೃತ್ತಿಯಲ್ಲಿ ಬಿಂಬಿಸಿದ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಸಂಪಾದಕೀಯ ಮಂಡಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ಸಂಚಿಕೆ ವಿಶ್ವವಿದ್ಯಾಲಯದ ಕಾರ್ಯವನ್ನು ಇನ್ನು ಚೆನ್ನಾಗಿ ಪ್ರತಿ ಬಿಂಬಿಸುವಂತಾಗಲಿ ಹಾಗೂ ಈ ತ್ರೈಮಾಸಿಕ ಪತ್ರಿಕೆಯು ಇನ್ನೂ ಹೆಚ್ಚು ಓದುಗರನ್ನು ತಲುಪಬೇಕೆಂದು ಆಶಿಸುತ್ತೇನೆ.

# ಕುಲಸಚಿವರ ಆಶಯ



**ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**
ಕುಲಸಚಿವರು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಅದರ ಜೊತೆಗೆ ದೇಸಿ ಯೋಜನೆ, ಸ್ಮೃತಿ ವನ, ಮಾದರಿ ಸಸ್ಯ ಪಾಲನ ಕೇಂದ್ರ, ಸಬರಮತಿ ಆಶ್ರಮ, ಜೈವಿಕ ಉದ್ಯಾನವನ, ಸಮಗ್ರ ಕೃಷಿ ಮತ್ತು ಪಶುಸಂಗೋಪನೆ, ಹಾಗೂ ಸರಕಾರಿ ಶಾಲೆಗಳ ದತ್ತು ಸ್ವೀಕಾರಗಳಂತಹ ಮುಂತಾದ ವಿಸ್ತರಣಾ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಅದರಂತೆ, ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರವು 'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆಯ ಪ್ರಥಮ ಹಾಗೂ ದ್ವಿತೀಯ ಸಂಚಿಕೆ ಮತ್ತು ವಿಶೇಷ ಸಂಚಿಕೆಯನ್ನು ಈಗಾಗಲೇ ಪ್ರಕಟಿಸಿರುವುದು ಅತ್ಯಂತ ಶ್ಲಾಘನೀಯವಾದುದು.

ಮುದುವರೆದು 'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆಯ ತೃತೀಯ ಸಂಚಿಕೆಯಲ್ಲಿ ಭಾರತ ದೇಶದ ಮೂಲ ಉದ್ಯೋಗವಾದ ಕೃಷಿಯಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ **"ಗೋ ಆಧಾರಿತ ಸಾವಯವ ಕೃಷಿಯ ಪ್ರಾತಕ್ಷಿಕೆ ಮತ್ತು ಸಂವಾದ ಕಾರ್ಯಗಾರ'**, 'ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಅಡಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾಗುತ್ತಿರುವ ಸ್ನಾತಕ ಪದವಿ ಕೋರ್ಸ್‌ಗಳಿಗೆ **ಪಠ್ಯ ವಿನ್ಯಾಸ ಮತ್ತು ಪಠ್ಯಕ್ರಮ ಅಭಿವೃದ್ಧಿ** ವಿಷಯದ ಕುರಿತು ಮೂರು ದಿನಗಳ ಕಾರ್ಯಗಾರ ಮತ್ತು ವಿಶ್ವವಿದ್ಯಾಲಯದ ಮೊದಲನೇ **"ಅಡ್ವಾನ್ಸಡ್ ಸರ್ಟಿಫಿಕೇಟ್ ಕೋರ್ಸ್ ಇನ್ ಕಮ್ಯೂನಿಕೇಶನ್ ಸ್ಕಿಲ್ಸ್ ಫಾರ್ ಪರ್ಸನಾಲಿಟಿ ಡೆವೆಲಪ್‌ಮೆಂಟ್ ಆ್ಯಂಡ್ ಎಂಪ್ಲಾಯಬಿಲಿಟಿ'**,ಯ ಉದ್ಘಾಟನಾ ಸಮಾರಂಭ, Orientation on YUVA Entrepreneurship Program, **ಗ್ರಾಮೀಣ ಬದುಕಿನ ಅನುಭವ ಹಾಗೂ ಅಧ್ಯಯನ** : ರೂರಲ್ ಇಮರ್ಷನ್ ಕಾರ್ಯಕ್ರಮ ಹಾಗೂ ವಿಶ್ವವಿದ್ಯಾಲಯದಲ್ಲಿ ನಡೆದ ಇನ್ನಿತರ ಕಾರ್ಯಕ್ರಮಗಳ ಬಗ್ಗೆ ಬಿಂಬಿಸಿದೆ.

ಈ ತ್ರೈಮಾಸಿಕ ಪತ್ರಿಕೆಯು ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ವಿವಿಧ ಚಟುವಟಿಕೆಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಲುಪಿಸುತ್ತಿರುವುದು ಶ್ಲಾಘನೀಯ. ಆದ್ದರಿಂದ ನಮಗೆಲ್ಲರಿಗೂ ಪ್ರೇರಣೆಯಾದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರಿಗೆ ಧನ್ಯವಾದಗಳು ಹಾಗೂ ಪ್ರಧಾನ ಸಂಪಾದಕರು, ಸಹ ಸಂಪಾದಕರು, ಸದಸ್ಯರುಗಳು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

# ಹಣಕಾಸು ಅಧಿಕಾರಿಗಳ ಮನದಾಳದ ಮಾತು



**ಶ್ರೀ ಪ್ರಶಾಂತ ಜೆ. ಸಿ.**
ವಿತ್ತಾಧಿಕಾರಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ "ಗ್ರಾಮೋದಯ" ತ್ರೈಮಾಸಿಕ ಪತ್ರಿಕೆಯು ವಿಶ್ವವಿದ್ಯಾಲಯದಲ್ಲಿ ಜರುಗುವ ಕಾರ್ಯಗಾರಗಳು, ಸಮಾವೇಶಗಳು ಹಾಗೂ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ಸುಂದರವಾಗಿ ಹಾಗೂ ಸ್ಪಷ್ಟವಾಗಿ ಮುದ್ರಣಗೊಳಿಸಿ ಜನಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿದೆ. ಈಗಾಗಲೇ, ಎರಡು ಸಂಚಿಕೆಗಳು ಪ್ರಕಟಿತಗೊಂಡಿದ್ದು, ಮೂರನೇ ಸಂಚಿಕೆಯು ಪ್ರಕಟಣೆಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ.

ಎಂದಿನಂತೆ, ಈ ಆವೃತ್ತಿಯಲ್ಲಿ ಲೇಖನಗಳು, ಸಾಧಕರ ಸಂದರ್ಶನ, ಕಾರ್ಯಗಾರ, ಸಮಾವೇಶ ಹಾಗೂ ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ವಿಸ್ತರಣಾ ಚಟುವಟಿಕೆಗಳ ಮಾಹಿತಿಯನ್ನು ಬಿಂಬಿಸಲಾಗಿದ್ದು, ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಸಾಧನೆಯನ್ನು ಮಾಡಿ, ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಹಾಗೂ ಮಹಿಳೆಯರಿಗೆ ಸ್ಫೂರ್ತಿಯಾಗಿರುವ ಶ್ರೀಮತಿ ಸುನಂದಾ ಗದ್ದಿಕೇರಿಯವರ ಸಂದರ್ಶನವನ್ನು ಪ್ರಕಟಿಸಿರುವುದು ವಿಶೇಷವಾಗಿದೆ.

ಹಾಗೆಯೇ, ಈ ತ್ರೈಮಾಸಿಕ ಪತ್ರಿಕೆಯು ಇನ್ನೂ ಸುಂದರವಾಗಿ ಪ್ರತಿಬಿಂಬಿಸಿ, ಇನ್ನೂ ಹೆಚ್ಚು ಓದುಗರನ್ನು ತಲುಪಿ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ. ನಮ್ಮೆಲ್ಲರಿಗೂ ಪ್ರೇರಣೆಯಾದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ವಿಶ್ವವಿದ್ಯಾಲಯದ ಕುಲಸಚಿವರು ಹಾಗೂ ಸಂಪಾದಕೀಯ ಮಂಡಳಿಯ ಅಧ್ಯಕ್ಷರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರಿಗೆ, ಪ್ರಧಾನ ಸಂಪಾದಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಇವರಿಗೆ ಮತ್ತು ಸಹ ಸಂಪಾದಕರು, ಸದಸ್ಯರುಗಳು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿಶೇಷ ಲೇಖನ



**ಡಾ. ಪ್ರಕಾಶ್ ಭಟ್**
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ
ಪರಿಷತ್ತಿನ ಸದಸ್ಯರು

# ಗ್ರಾಮಾಭಿವೃದ್ಧಿಯ ಸಂಸ್ಕಾರಗಳು

ಹಳ್ಳಿಗಳಲ್ಲಿ ಕೆಲಸ ಮಾಡುವ ನಿರ್ಣಯ ಸುಲಭ. ಒಂದು ಭಾವನಾತ್ಮಕ ಬಿಂದುವಿನಲ್ಲಿ ಆದರ್ಶದ ನೆರವಿನಿಂದ ಅದು ಮನಸ್ಸಿನಲ್ಲಿ ಹರಳುಗಟ್ಟಿಬಿಡಬಲ್ಲದು. ಜೀವನದ ಧ್ಯೇಯವಾಗಿ, ಸಂಕಲ್ಪವಾಗಿ ಅದು ನಮ್ಮಲ್ಲಿ ಮೂಡಬಹುದು. ಆದರೆ ಅದನ್ನು ಸಾಧಿಸುವುದು ಬೌದ್ಧಿಕ, ಭಾವನಾತ್ಮಕ ಹಾಗೂ ಶಾರೀರಿಕ ಪರಿಶ್ರಮವನ್ನು ಬೇಡುವಂತಹದು. ಕುಳಿತಲ್ಲಿ, ನಿಂತಲ್ಲಿ, ಕನಸಿನಲ್ಲಿ ನಮ್ಮನ್ನು ಆವರಿಸಿ ಅದೊಂದು ಧ್ಯಾನವಾಗಿ, ಗೀಳಾಗಿ ನಮ್ಮ ಮೇಲೆ ಆವಾಹನೆಗೊಳ್ಳಬಹುದು. ಆಗ ಜೀವನದಲ್ಲಿ ಉಳಿದೆಲ್ಲವೂ ಅಮುಖ್ಯವಾಗಿ ಕಾಣಬಹುದು. ಮನೆ, ಮಠ, ಸ್ನೇಹಿತರು, ಸುಖ–ದುಃಖಗಳು, ಪ್ರವಾಸ ಎಲ್ಲವೂ ಹಿಂದೆ ಸರಿಯಬಹುದು. ಅವುಗಳ ಕುರಿತ ರುಚಿಯೇ ಹೋಗಿಬಿಡಬಹುದು. ಹಾಗಾದಾಗ ಗ್ರಾಮಾಭಿವೃದ್ಧಿಯ ಕಾರ್ಯಕರ್ತನೊಬ್ಬ ದೀಕ್ಷಿತನಾದ ಎನ್ನಬಹುದು.

ಆದರೆ ಸಾಧನೆಗೆ ಅಷ್ಟೇ ಸಾಲದು. ನನ್ನ ಗುರುಗಳಾದ ಬೈಫ್ ಸಂಸ್ಥೆಯ ಸ್ಥಾಪಕರಾದ, ಗಾಂಧೀಜಿಯ ಶಿಷ್ಯ ಡಾ.ಮಣಿಭಾಯಿ ದೇಸಾಯಿ ಹೇಳುವುದಿತ್ತು "ಗ್ರಾಮೀಣಾಭಿವೃದ್ಧಿಗಾಗಿ ಕೆಲಸ ಮಾಡುವ ಕಾರ್ಯಕರ್ತರಿಗೆ ಎರಡು ಅರ್ಹತೆಗಳು ಬೇಕು. ಸಮಾಜಕ್ಕಾಗಿ ದುಡಿಯುವ ತುಡಿತವೊಂದಾದರೆ ಏನು ಮಾಡಬೇಕು ಎಂಬ ಜ್ಞಾನ ಇನ್ನೊಂದು." ಸರ್ಕಾರೇತರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಹಲವರಿಗೆ ತುಡಿತವೇನೋ ಇದೆ, ಏನು ಮಾಡಬೇಕೆನ್ನುವ ಕುರಿತು ತಾಂತ್ರಿಕ, ವೈಜ್ಞಾನಿಕ ಜ್ಞಾನವಿಲ್ಲ. ಸರಕಾರಿ ವ್ಯವಸ್ಥೆಯಲ್ಲಿ ಜ್ಞಾನವಿದ್ದರೆ ತುಡಿತವಿಲ್ಲ. ಈ ಒಂದಿದ್ದರೆ ಒಂದಿಲ್ಲದ ಸ್ಥಿತಿಯಿಂದಾಗಿ ಉದ್ದೇಶಿತ ಕಾರ್ಯ ವಿಫಲವಾಗುತ್ತದೆ. ಹಾಗಾಗಿ ಗ್ರಾಮೀಣಾಭಿವೃದ್ಧಿಯ ಕಾರ್ಯಕರ್ತರನ್ನು ಸಿದ್ಧಪಡಿಸುವ ಕ್ರಮದಲ್ಲಿ ಇವೆರಡೂ ಅಂತರ್ಗತವಾಗಿರಬೇಕೆಂಬುದು ಮುಖ್ಯ ನಿರ್ಣಯವಾಗಬೇಕು.

ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಉದ್ಯೋಗ, ಆರೋಗ್ಯ, ಶಿಕ್ಷಣ, ಮಣ್ಣು, ನೀರು, ಪರಿಸರ ಇವೆಲ್ಲವೂ ಗ್ರಾಮೀಣಾಭಿವೃದ್ಧಿಯ ವಿವಿಧ ಮಗ್ಗಲುಗಳೇ ಆಗಿರುವುದರಿಂದಲೂ ಅವೆಲ್ಲವೂ ಪರಸ್ಪರ ಸಾವಯವ ಸಂಬಂಧಗಳನ್ನು ಹೊಂದಿರುವುದರಿಂದಲೂ ಅವುಗಳ ಬಗ್ಗೆ ಒಂದಿಷ್ಟು ತಿಳಿವಳಿಕೆ ಹೊಂದುವುದು ಕಾರ್ಯಕರ್ತರ ಅರ್ಹತೆಯ ಮಾನದಂಡವಾಗಬೇಕು. 'ಎಲ್ಲದರ ಕುರಿತು ಒಂದಿಷ್ಟು, ಒಂದರ ಕುರಿತು ಎಲ್ಲವೂ (something of everything, everything of something)' ಇದು ಕಾರ್ಯಕರ್ತರನ್ನು ಕಟ್ಟಲು ಸೂತ್ರ, ಅಂದರೆ ಯಾವುದೋ ಒಂದು ವಿಷಯದಲ್ಲಿ ತಜ್ಞತೆ ಹಾಗೂ ಉಳಿದೆಲ್ಲವುಗಳ ಕುರಿತು ಒಂದಿಷ್ಟು ಜ್ಞಾನ ಬೇಕು. ಹೀಗಾದಾಗ ಮಾತ್ರ ಕಾರ್ಯಕರ್ತ ಹಳ್ಳಿಗರಿಗೆ ಉಪಯುಕ್ತ. ಇಲ್ಲದಿದ್ದಲ್ಲಿ ಅವರು ಹೇಳಿದ್ದನ್ನೇ ಹೇಳುತ್ತ, ಎಲ್ಲ ಸಮಸ್ಯೆಗಳಿಗೂ ಒಂದೇ ಉತ್ತರ ಕೊಡುತ್ತ ಹಳ್ಳಿಗರಿಂದ ಅವಗಣನೆಗೆ ಈಡಾಗುತ್ತಾರೆ ಎನ್ನುವುದು ಅನುಭವ. ಬಹುಶಿಸ್ತೀಯ ಜ್ಞಾನ ಗ್ರಾಮಾಭಿವೃದ್ಧಿ ಕಾರ್ಯಕರ್ತರ ಅಪೇಕ್ಷಣೀಯ ಗುಣ.

ಹೀಗೆ ಎಲ್ಲ ವಿಷಯಗಳ ಕುರಿತು ತಿಳಿದುಕೊಳ್ಳಲು ಮಾನಸಿಕವಾದ ಸಿದ್ಧತೆಯೊಂದು ಬೇಕಾಗುತ್ತದೆ. ವಿದ್ಯಾಭ್ಯಾಸ ಮುಗಿಸಿ 'ತಜ್ಞ'ರೆಂದು ಹೊರಬಂದು ಗ್ರಾಮಾಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸಹೊರಟವರಿಗೆ ಇದು ಮೊದಮೊದಲು ಚಡಪಡಿಕೆಯನ್ನುಂಟುಮಾಡಬಲ್ಲದು. ಉದಾಹರಣೆಗೆ, ಅರ್ಥಶಾಸ್ತ್ರಜ್ಞನೊಬ್ಬನೋ, ಪಶುವೈದ್ಯನೊಬ್ಬನೋ ಉಳಿದ ವಿಷಯಗಳಾದ ಮಣ್ಣು–ನೀರುಗಳ ಸಂರಕ್ಷಣೆ, ತೋಟಗಾರಿಕೆ, ಕಸಿಗಿಡ ತಯಾರಿ ಇತ್ಯಾದಿಗಳನ್ನು ಕಲಿಯುವಾಗ ವಿದ್ಯಾರ್ಥಿಯ ವಿನಯ

ಬೇಕಾಗುತ್ತದೆ. ಹಲವು ಸಲ ಅದು ಅವರ ವೃತ್ತೀಯ ಅಭಿಮಾನಕ್ಕೆ ಪೆಟ್ಟು ಕೊಡಬಲ್ಲದು. ಅದನ್ನು ಮೀರಿ, ಅಕೆಡಮಿಕ್ ಆಗಿ ಏನನ್ನೂ ಓದಿರದವರನ್ನು ಗುರುವಾಗಿ ಪರಿಗಣಿಸಿ ಕಲಿಯುವುದು ಜ್ಞಾನವನ್ನಷ್ಟೇ ಅಲ್ಲ, ಕಲಿಯುವ ವಿನಯವನ್ನೂ ಕಲಿಸುತ್ತದೆ. ಇದು ಮುಂದೆ ಹಳ್ಳಿಯ ಜನರಿಂದಲೂ ಕಲಿಯಲು ಬೇಕಾದ ಹಾಗೆ ಕಾರ್ಯಕರ್ತರನ್ನು ಸಿದ್ಧಗೊಳಿಸುವ ಪರಿಯೇ ಹೌದು.

### ಗ್ರಾಮವಾಸ

ಇಂದು ಹಳ್ಳಿಗಳಲ್ಲಿ ವಾಸಮಾಡಿ ಹಳ್ಳಿಗಳೊಡನೆ ಕೆಲಸಮಾಡುವ ಒಲವು ಯಾರಿಗೂ ಇಲ್ಲ. ನಗರದಿಂದ ಬಂದು ಹಳ್ಳಿಗಳಲ್ಲಿ ಕೆಲಸ ಮಾಡುವುದು ಇಂದಿನ ಅಭ್ಯಾಸ. ಹೆಚ್ಚಿನ ತಜ್ಞ ವೃತ್ತಿಪರರು ಹಳ್ಳಿಗಳಿಂದ ವಿಮುಖರಾಗಿರುತ್ತಾರೆ ಹಾಗೂ ಶಹರಗಳಲ್ಲಿ ವಾಸಿಸುತ್ತಾರೆ. ಹಳ್ಳಿಗಳಲ್ಲೇ ಉಳಿದುಕೊಂಡರೂ ತಮ್ಮ ಸಂಸ್ಕಾರಬಲದಿಂದಾಗಿ ಹಳ್ಳಿಯ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ಅಶಕ್ತರಾಗಿರುತ್ತಾರೆ. ಹಳ್ಳಿಗಳಲ್ಲಿರುವ 'ಕಡಿಮೆ ಬಡವರ' ಕಡೆಗಷ್ಟೇ ಅವರ ಗಮನ ಹರಿಯಬಲ್ಲುದು. ಹಳ್ಳಿಗಳ ವೈವಿಧ್ಯಪೂರ್ಣ ಸಮಸ್ಯೆಗಳಿಗೆ ಸಂಬಂಧಿಸಿ ತಮ್ಮ ತರಬೇತಿ ಹೇಳಿಕೊಟ್ಟ ತಜ್ಞ ವಿಷಯಗಳಿಗಷ್ಟೇ ಪರಿಹಾರ ಹೇಳುವಲ್ಲಿ ತೊಡಗಿಕೊಳ್ಳುತ್ತಾರೆ. ಅದರ ಜೊತೆ 'ತನಗೇ ಗೊತ್ತಿದೆ' ಹಾಗೂ 'ತಾನು ಹಳ್ಳಿಯ ಜನರಿಗಿಂತ ಉತ್ತಮನು' ಎನ್ನುವ ಭಾವವನ್ನು ಅವರ ಕಲಿಕೆ ಅವರಲ್ಲಿ ಬಿತ್ತಿದ್ದಲ್ಲಿ ಅದು ನಾವು ಕಾಣಬಹುದಾದ ಅತಿಕೆಟ್ಟ ಸ್ಥಿತಿ. ಹಾಗಾದಾಗ ಅವರಿಗೆ ಹಳ್ಳಿಯ ಜನ ಮೂರ್ಖರೂ, ಹಿಂದುಳಿದವರೂ ಹಾಗೂ ಆದಿಮ ಸ್ಥಿತಿಯಲ್ಲಿರುವವರೂ ಆಗಿ ಕಾಣತೊಡಗುತ್ತಾರೆ. ಹಳ್ಳಿಗರ ಬಡತನಕ್ಕೆ ಬಡವರೇ ಜವಾಬ್ದಾರರಾಗಿ ಕಾಣತೊಡಗುತ್ತದೆ. ಇದನ್ನು 'ಸಮಾಜ ಶಾಸ್ತ್ರೀಯ ಡಾರ್ವಿನಿಸಂ' ಎಂದು ಗುರುತಿಸಬಹುದು. ಅಂದರೆ ಯಾರು ಉತ್ತಮರೋ, ಅನುಕೂಲಸ್ಥರೋ ಅವರೇ ಸಮಾಜದಲ್ಲಿ ಯೋಗ್ಯರಾಗಿ ಕಾಣತೊಡಗುತ್ತಾರೆ.

ಹರಬರ್ಟ್ ಸ್ಪೆನ್ಸರ್ ಡಾರ್ವಿನ್‌ನ ಜೈವಿಕ ವಿಕಾಸ ಹಾಗೂ ನೈಸರ್ಗಿಕ ಆಯ್ಕೆಯ ತತ್ವಕ್ಕೆ ಸಮಾನಾಂತರವಾಗಿ ಈ ಆರ್ಥಿಕವಾದವನ್ನು ಮಂಡಿಸಿದ, ಸ್ಪೆನ್ಸರ್ 'ಗಳಿಸಿದ' (acquired) ಗುಣಗಳೂ ಅನುವಂಶಿಕವಾಗಿ ಮುಂದುವರೆಯುತ್ತದೆ ಎಂದು ಹೇಳುತ್ತಾನೆ. ಈ ರೀತಿಯ ನಂಬುಗೆ ಸ್ಪೆನ್ಸರ್‌ನನ್ನು ಓದದವರಲ್ಲೂ ಪ್ರಚಲಿತವಿದೆ. ಯೋಗ್ಯ ನಡವಳಿಕೆ, ಪ್ರಾಮಾಣಿಕತೆ, ನೈತಿಕತೆ, ಮಿತವ್ಯಯ ಇವೆಲ್ಲವೂ ಕೆಲವು ಸಮುದಾಯಗಳಲ್ಲಿರುತ್ತವೆ. ಇನ್ನುಳಿದವುಗಳಲ್ಲಿ ರುವುದಿಲ್ಲ ಎಂದು ಇವರು ನಂಬುತ್ತಾರೆ. ಹಾಗೆ ನೋಡಿದಲ್ಲಿ ಇದು ನಮ್ಮ ಸಮಾಜದಲ್ಲಿ ಪ್ರಚಲಿತವಿರುವ ಪೂರ್ವಗ್ರಹ. ರಾಬರ್ಟ್ ಚೇಂಬರ್ಸ್ ಗ್ರಾಮೀಣಾಭಿವೃದ್ಧಿ ಪ್ರವಾಸದ (Rural Development Tourism) ಕುರಿತು ಹೇಳುತ್ತಾರೆ. "ನಗರ ಮೂಲದ ತಜ್ಞರಿಗೆ ಮಾಹಿತಿಯ ಹಾಗೂ ನೇರ ಅನುಭವದ ಆಕರ ಗ್ರಾಮೀಣ ಪ್ರವಾಸ, ಅಂದರೆ ಸಂಕ್ಷಿಪ್ತ ಗ್ರಾಮ ಭೇಟಿ" (Rural Development, Putting the Last First, 1983 P.10) ಇದು ಹೆಚ್ಚೆಂದರೆ ಹಳ್ಳಿಯ ಸಮಸ್ಯೆಯ ಒಂದು ಮಗ್ಗುಲನ್ನಷ್ಟೇ ಕಾಣಿಸಬಲ್ಲುದು. ಆ ನೋಟ ಆಳವೂ ಅಲ್ಲದ, ಕೇಂದ್ರಿಕೃತವೂ ಅಲ್ಲದ ಕತೆಯೋ ಗಾಳಿಮಾತೋ ಆಗುವುದೇ ಹೆಚ್ಚು ಸಂಭವನೀಯ. ಈ ರೀತಿಯಲ್ಲಿ ಹಳ್ಳಿಗಳ ಸಮಸ್ಯೆಗಳನ್ನು ತಿಳಿಯಲು ಬರುವವರಲ್ಲಿ ಮೂರು ವಿಷಯಗಳು ಸಾಮಾನ್ಯ, ಅವರು ನಗರಗಳಿಂದ ಬಂದಿರುತ್ತಾರೆ, ಅವರಿಗೆ ಏನೋ ಅರಿತುಕೊಳ್ಳಬೇಕಾಗಿದೆ ಹಾಗೂ ಅವರಿಗೆ ಸಮಯ ಕಡಿಮೆ ಇದೆ.

ಗ್ರಾಮೀಣ ಬಡತನವನ್ನು, ಪರಿಸ್ಥಿತಿಯನ್ನು ಅರಿಯಲು ತೊಡಕಾಗುವ ಆರು ಪೂರ್ವಗ್ರಹಗಳನ್ನು ರಾಬರ್ಟ್ ಚೇಂಬರ್ಸ್ ಅವರು ಚರ್ಚಿಸುತ್ತಾರೆ (ಅದೇ ಪು 13–22).

ಮೊದಲನೆಯದು 'ದೇಶಿಕ' ಪೂರ್ವಗ್ರಹ. ಇದು ನಗರ, ಹೈವೇ ಹಾಗೂ ರಸ್ತೆ ಪಕ್ಕದ ಹಳ್ಳಿಗಳ ಪರವಾದ ಪೂರ್ವಗ್ರಹ. ಹಳ್ಳಿಗಳ ಭೇಟಿಗಳು ವಾಹನಗಳ ಮೂಲಕ ಆಗುವುದರಿಂದ ನಗರ ಪ್ರದೇಶದಿಂದ ಸುಲಭವಾಗಿ ಹೋಗಲು ಸಾಧ್ಯವಾಗುವ, ಹೈವೇಗಳಿಗೆ, ಡಾಂಬರು ರಸ್ತೆಗಳಿಗೆ ಸಮೀಮಪವಿರುವ ಹಳ್ಳಿಗಳನ್ನು ಭೇಟಿಮಾಡುವುದು. ಅಧ್ಯಯನಕ್ಕೆ, ಅಭಿವೃದ್ಧಿ ಚಟುವಟಿಕೆ ನಡೆಸಲು ಇಂತಹ ಹಳ್ಳಿಗಳೇ ಆಯ್ಕೆಯಾಗುತ್ತವೆ. ಉದಾಹರಣೆಗೆ, ಹೊಸ ಬೀಜ ಗೊಬ್ಬರಗಳ ಪ್ರಾತ್ಯಕ್ಷಿಕೆಗಳು ರಸ್ತೆ ಪಕ್ಕದ ಹೊಲಗಳಲ್ಲಿರುವುದೇ ಹೆಚ್ಚು.

ಹಳ್ಳಿಗೆ ಹೋದಾಗಲೂ ಊರಿನ ಬಡವರು ಮುಖ್ಯರಸ್ತೆಗಳಿಂದ ದೂರ, ಥಟ್ಟನೆ ಕಾಣದ ಪ್ರದೇಶದಲ್ಲಿರುತ್ತಾರೆ. ಹಾಗಾಗಿ ಬಡವರು ನಗರದಿಂದ ಬಂದವರಿಗೆ ಸುಲಭವಾಗಿ ಕಾಣಲಾರರು. ಶ್ರೀಲಂಕಾದಲ್ಲಿ ನಡೆದ ಅಧ್ಯಯನವೊಂದರಲ್ಲಿ ಎಮ್. ಪಿ. ಮೂರ್ ಹಾಗೂ ಜಿ. ವಿಕ್ರಮಸಿಂಘೆ ಇದನ್ನು ಗಮನಿಸುತ್ತಾರೆ.

ಬಡ ಕುಟುಂಬಗಳ ಸಂಖ್ಯೆ ವಾಟ್ಟಿಗಮದ 14 ಶೇಕಡಾದಿಂದ ವೆಲಿಗಲಗೋಡಾದ 41 ಶೇಕಡಾದವರೆಗೆ ಇದೆ. ಅಷ್ಟಿದ್ದರೂ ಹಳ್ಳಿಗಳಲ್ಲಿ ಕಾರಿನಲ್ಲಿ ಹೋಗಬಹುದಾದ ಯಾವ ರಸ್ತೆಗಳಲ್ಲಿ ಹೋದರೂ ಒಂದಾದರೂ ಬಡಕುಟುಂಬದ ಮನೆ ಕಾಣುವುದಿಲ್ಲ.

ಎರಡನೆಯದು ಯೋಜನೆಗಳ ಪೂರ್ವಗ್ರಹ. ಅಂದರೆ ಎಲ್ಲಿ ಸಫಲ ಯೋಜನೆಗಳು ನಡೆಯುತ್ತಿರುತ್ತವೋ ಅಲ್ಲಿಗೇ ಹೋಗುವುದು. ಉದಾಹರಣೆಗೆ ಭಾರತಕ್ಕೆ ಬಂದವರೆಲ್ಲ ಅಮುಲ್‌ಗೆ ಭೇಟಿ ಕೊಡುವುದು.

ಮೂರನೆಯದು 'ವ್ಯಕ್ತಿ' ಪೂರ್ವಗ್ರಹ ಮೇಲ್ವರ್ಗದವರನ್ನು ಭೇಟಿಮಾಡಿ ಹಳ್ಳಿಯ ಸಮಸ್ಯೆಗಳನ್ನು ತಿಳಿಯಲು ಪ್ರಯತ್ನಿಸುವುದು ಈ ಪೂರ್ವಗ್ರಹದ ತಿರುಳು. ಪ್ರಗತಿಪರ ರೈತರು, ಹಳ್ಳಿಯ ನಾಯಕರು, ವ್ಯಾಪಾರಿಗಳು, ಶಿಕ್ಷಕರು, ಧಾರ್ಮಿಕ ನಾಯಕರು ಈ ವರ್ಗದಲ್ಲಿ ಸೇರಿರುತ್ತಾರೆ. ಹಾಗೆಯೇ 'ಪುರುಷ ಪೂರ್ವಗ್ರಹ', ಹಳ್ಳಿಗಳಲ್ಲಿ ಕರೆದ ಸಭೆಗಳಲ್ಲಿ ಮಹಿಳೆಯರು ಇಲ್ಲದಿರುವುದು ಸಾಮಾನ್ಯ, ಆದ್ದರಿಂದ ತಜ್ಞರು ಅರ್ಥಮಾಡಿಕೊಳ್ಳುವುದು ಪುರುಷ ದೃಷ್ಟಿಕೋನದಿಂದ ಕಂಡಿದ್ದೇ ಆಗಿರುತ್ತದೆ. ಮಹಿಳೆಯರೊಮ್ಮೆ ಇದ್ದರೂ ಬಡಮಹಿಳೆಯರು, ವಿಧವೆಯರು, ಅವಿವಾಹಿತ ಮಹಿಳೆಯರು, ಕುಟುಂಬದ ಮುಖ್ಯಸ್ಥೆಯರು ಅವರ ನಡುವೆ ಕಾಣಲಾರರು.

ಬಳಕೆದಾರರ ಪೂರ್ವಗ್ರಹ ಇನ್ನೊಂದು. ಯಾವುದೇ ತಂತ್ರಜ್ಞಾನ, ಸೌಲಭ್ಯ, ಸೇವೆಗಳನ್ನು ಬಳಸುವವರನ್ನು ಬಳಸದೇ ಇರುವವರಿಗಿಂತ ಹೆಚ್ಚಾಗಿ ಭೇಟಿ ಮಾಡಲಾಗುತ್ತದೆ. ಚಟುವಟಿಕೆಯಿಂದಿರುವವರು, ಆರೋಗ್ಯದಿಂದಿರುವವರು ಹೆಚ್ಚಾಗಿ ಸಂದರ್ಶಿಸಲ್ಪಡುತ್ತಾರೆ.

ಅನುಕೂಲದ ಋತುವಿನ ಪೂರ್ವಗ್ರಹ ನಾಲ್ಕನೆಯದು. ಆಯಾ ಊರಲ್ಲಿ ಯಾವ ಕಾಲವು ಭೇಟಿಗೆ ಅನುಕೂಲಕರವೋ ಆ ಕಾಲದಲ್ಲಿಯೇ ಅಲ್ಲಿಗೆ ಹೋಗುವುದು ಹಾಗೂ ಕಠಿಣ ಕಾಲದಲ್ಲಿ ಹೋಗದಿರುವುದು. ಉದಾಹರಣೆಗೆ ವಿಜಯಪುರಕ್ಕೆ ಬೇಸಿಗೆಯಲ್ಲೂ, ಮಲೆನಾಡಿಗೆ ಮಳೆಗಾಲದಲ್ಲೂ ಹೋಗದಿರುವುದು. ಇದರಿಂದ ಕಠಿಣಕಾಲದ ಅಲ್ಲಿಯ ಸಮಸ್ಯೆ ಸಂದರ್ಶಕರಿಗೆ ಅರ್ಥವಾಗುವುದೇ ಇಲ್ಲ.

ಇನ್ನೊಂದು ದೇಶಕ್ಕೆ ಅಧ್ಯಯನಕ್ಕೆ ಹೋದಾಗ ಸಭ್ಯತೆಯ ಕಾರಣದಿಂದ ಆ ದೇಶದ ತೀರ ಬಡಪ್ರದೇಶವನ್ನೋ ಕುಟುಂಬಗಳನ್ನೋ ಸಂದರ್ಶಿಸದಿರುವುದು ರಾಜತಾಂತ್ರಿಕ ಪೂರ್ವಗ್ರಹ.

ಕೊನೆಯದು ಮತ್ತು ಅತಿ ಮಹತ್ವದ್ದು ನಮ್ಮ-ನಮ್ಮ ಓದಿನಿಂದ ಬರುವ ಪೂರ್ವಗ್ರಹ (Professional Bias) ಬಡತನ, ದೈಹಿಕ ದೌರ್ಬಲ್ಯ, ಅನಾರೋಗ್ಯ, ಸಮಾಜದಿಂದ ಪ್ರತ್ಯೇಕತೆ, ಆಕಸ್ಮಿಕ ಸನ್ನಿವೇಶಗಳನ್ನು ಎದುರಿಸಲಾಗದ ಸ್ಥಿತಿ ಇವು ಒಂದರೊಳಗೊಂದು ಬೆಸೆದಿರುತ್ತವಾದರೂ ತಜ್ಞರ ತರಬೇತಿ ಇವುಗಳ ಸಂಬಂಧಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಬಿಡಲಾರದು.

ಈ ಕಾರಣಗಳಿಂದಲೇ "ನಮ್ಮ ಸಮಾಜಶಾಸ್ತ್ರದ ತತ್ವಗಳಲ್ಲಿ ಹಾಗೂ ಸಾಹಿತ್ಯದಲ್ಲಿ ಬಡವರು ಒಂದೋ ಉದಾತ್ತರು ಅಥವಾ ಅಪ್ರಾಮಾಣಿಕರು, ಆಕ್ರಮಣಶೀಲರು ಅಥವಾ ನಿಷ್ಕ್ರಿಯರು, ಅಸಹಾಯಕರು ಅಥವಾ ಸ್ವಾವಲಂಬಿಗಳಾಗಿ ಚಿತ್ರಿತರಾಗಿದ್ದಾರೆ" (Poor Economics, A Banerjee and Duflo Foreword P.x)

### ವಿಶ್ವಾಸದ ಕೊರತೆ

ಗ್ರಾಮೀಣರು ಹಾಗೂ ಗ್ರಾಮಾಭಿವೃದ್ಧಿ ವೃತ್ತಿನಿರತರ ನಡುವೆ ಕಂದಕವೊಂದಿದೆ ಹಾಗೂ ಬಹಳಸಲ ಅದು ದಾಟಲಾರದ್ದಾಗಿ ಕಾಣುತ್ತದೆ. ಪರಸ್ಪರ ಸಂದೇಹ, ಅವಿಶ್ವಾಸ ಇದಕ್ಕೆ ಕಾರಣ. ಈ ಕಾರ್ಯಕರ್ತರು, ವೃತ್ತಿನಿರತರು ನಗರದ ಮೂಲದವರಿರಲಿ, ಗ್ರಾಮೀಣ ಪ್ರದೇಶದವರಿರಲಿ ಹಳ್ಳಿಗಳಿಗೆ ಬರುವುದು ಮಾತ್ರ ನಗರಗಳಲ್ಲಿ ಕಲಿತು. ಹಳ್ಳಿಗರನ್ನು ಮೂರ್ಖರನ್ನಾಗಿ, ಸೋಮಾರಿಗಳನ್ನಾಗಿ, ಆಕ್ರಮಣಶೀಲರನ್ನಾಗಿ ಕಾಣುವ ತರಬೇತಿ ಅವರಿಗೆ ವಿದ್ಯಾಭ್ಯಾಸದ ಸಮಯದಲ್ಲಿ ಆಗಿರುತ್ತದೆ. ತಾವು ಹಳ್ಳಿಗರ ಉನ್ನತಿಗಾಗಿ ಶ್ರಮಿಸುತ್ತೇವೆ, ಆದ್ದರಿಂದ ಬಡವರು ತಮ್ಮನ್ನು ಗೌರವದಿಂದ, ಕೃತಜ್ಞತಾಭಾವದಿಂದ ಕಾಣಬೇಕು ಎಂಬ ನಿರೀಕ್ಷೆ ಅವರಲ್ಲಿರುತ್ತದೆ. ತಾವು ತಮ್ಮ ವಿದ್ಯಾಭ್ಯಾಸ, ಆರ್ಥಿಕತೆ, ಆರೋಗ್ಯ, ಸ್ವಚ್ಛತೆ, ಭಾಷೆ ಎಲ್ಲವುಗಳಲ್ಲೂ ಹಳ್ಳಿಗರಿಗಿಂತ ಉತ್ತಮರೆಂಬ ನಂಬಿಕೆಯಿಂದಲೇ ಹಳ್ಳಿಗಳಿಗೆ ಬಂದಿರುವ ಅವರಿಗೆ ಗೌರವದಿಂದ ಮಾತಾಡಿಸದ, ಕೃತಜ್ಞತೆಯಿಂದ ಕಾಣದ ಹಳ್ಳಿಗರು ಕೃತಘ್ನರಾಗಿ ಕಾಣತೊಡಗುತ್ತಾರೆ. ಇದಕ್ಕೆ ಪ್ರತಿಯಾಗಿ, ಗ್ರಾಮಸ್ಥರು ಹಳ್ಳಿಗೆ ಬರುವ ಈ ತಜ್ಞರನ್ನು 'ಹೊರಗಿನವರು' ಎಂದೇ ಕಾಣುತ್ತಾರೆ. ಹೊರಗಿನವರಿಗೆ ತಮ್ಮ ಒಳಿತಿನ ಉದ್ದೇಶವಿರುವುದಿಲ್ಲ. ಪುಸ್ತಕದಲ್ಲಿ ಓದಿದ ವಿಷಯವನ್ನಷ್ಟೇ ಹೇಳುತ್ತಾರೆ. ಇವರ ಅನುಭವವಿಲ್ಲದ ಜ್ಞಾನದಿಂದ ತಮಗೇನೂ ಪ್ರಯೋಜನವಿಲ್ಲ ಎಂಬ ಮಾನಸಿಕತೆಯಲ್ಲಿ ಹಳ್ಳಿಗರಿರುತ್ತಾರೆ. ಹೀಗೆ ಪರಸ್ಪರರನ್ನು ಅವಿಶ್ವಾಸದಿಂದ, ಸಂದೇಹದಿಂದ ಕಾಣುವ ಈ ಎರಡು ಸಮುದಾಯಗಳು ಒಟ್ಟಾಗಿ ಯಾವ ಅರ್ಥಪೂರ್ಣ ಕಾರ್ಯವನ್ನೂ ಮಾಡಲಾರದೆ ಪರಸ್ಪರ ದೂಷಣೆಯಲ್ಲಿ ನಿರತರಾಗುವುದು ಹೆಚ್ಚಿನ ಅಭಿವೃದ್ಧಿ ಯೋಜನೆಗಳ ಫಲಶ್ರುತಿ.

ಹಾಗಾಗಿ ಸರಿಯಾದ ಧೋರಣೆಯಿಂದ ಗ್ರಾಮೀಣರ ಕುರಿತ ಗೌರವದಿಂದ ಸ್ನೇಹಭಾವದಿಂದ ಹಳ್ಳಿಯಲ್ಲೇ ಉಳಿದು ಹಳ್ಳಿಗಳ ಸಮಸ್ಯೆಗಳನ್ನು ಅವರಿಂದಲೇ ತಿಳಿಯುವ ಬದ್ಧತೆ ಕಾರ್ಯಕರ್ತರಿಗೆ ಬೇಕು. ಕೇವಲ ಹಳ್ಳಿಯಲ್ಲಿ ಉಳಿದ ಮಾತ್ರಕ್ಕೆ ಎಲ್ಲವೂ ಸಾಧಿಸಿಬಿಡುವುದೂ ಇಲ್ಲ. ಯಾರಿಗೆ ಸಮಸ್ಯೆಯಿದೆಯೋ ಅವರಿಗೆ ಆ ಕುರಿತು ಹೆಚ್ಚು ತಿಳಿದಿದೆಯೆಂಬ ಭರವಸೆಯಿರಬೇಕು. ಹಳ್ಳಿಗರನ್ನು ತಮ್ಮ ಸಮಾನರೆಂದೂ,

ಹಳ್ಳಿಯ ಕುರಿತು, ಅಲ್ಲಿಯ ಸಮಸ್ಯೆಯ ಕುರಿತು ನಮಗಿಂತ ಹೆಚ್ಚು ತಿಳಿದವರೆಂದೂ ನಂಬಿದ ತಕ್ಷಣದಲ್ಲೇ ಅವರೊಡನೆ ನಮ್ಮ ಸಂವಹನದಲ್ಲಿ, ವ್ಯವಹಾರದಲ್ಲಿ ಗುಣಾತ್ಮಕ ಬದಲಾವಣೆ ಕಾಣಿಸಲಾರಂಭಿಸುತ್ತದೆ. ಹಾಗೆ ನಡೆದುಕೊಳ್ಳಲು ಜ್ಞಾನ, ಧೋರಣೆ ಹಾಗೂ ಕೌಶಲ ಸಿದ್ಧಿಸುವಂತಹ ತರಬೇತಿ ಗ್ರಾಮಾಭಿವೃದ್ಧಿ ಕಾರ್ಯಕರ್ತರಿಗೆ - ಅವರು ಯಾವ ವಿಷಯದ ಅಧ್ಯಯನವನ್ನೇ ಮಾಡಲಿ–ತೀರ ಅಗತ್ಯ.

**ವಿಶೇಷ ಕಾರ್ಯಾಗಾರ**

# ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯಲ್ಲಿ ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮಗಳ ಪಠ್ಯಕ್ರಮ ವಿನ್ಯಾಸ ಹಾಗೂ ವಿಷಯ ಅಭಿವೃದ್ಧಿ ಕಾರ್ಯಾಗಾರ



**ಡಾ. ಅಭಯಕುಮಾರ ಗಸ್ತಿ**
ಸಂಯೋಜಕರು,
ಎಂ.ಕಾಂ. ಕಾರ್ಯಕ್ರಮ ಮತ್ತು
ಸಂಯೋಜಕರು,
ಆಂತರಿಕಗುಣಮಟ್ಟ ಭರವಸೆ ಕೋಶ,
ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ




ಆಂತರಿಕ ಗುಣಮಟ್ಟ ಭರವಸೆ ಕೋಶ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಮತ್ತು ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ ಬೆಂಗಳೂರು ಇವರುಗಳ ಸಹಯೋಗದಲ್ಲಿ ದಿನಾಂಕ 13, 14 ಮತ್ತು 15ನೇ ಸೆಪ್ಟೆಂಬರ್ 2021 ರಂದು ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಭವನದಲ್ಲಿ "ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯಲ್ಲಿ ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮಗಳ ಪಠ್ಯಕ್ರಮ ವಿನ್ಯಾಸ ಹಾಗೂ ವಿಷಯ ಅಭಿವೃದ್ಧಿ" ವಿಷಯದ ಕುರಿತು ಮೂರು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಾಗಾರಕ್ಕೆ ಆಗಮಿಸಿದ ಎಲ್ಲರನ್ನು ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ, ಕುಲಸಚಿವರು, ಕ.ರಾ.ಗ್ರಾ ಮತ್ತು ಪಂ.ರಾ.ವಿ.ವಿ., ಗದಗ ಸ್ವಾಗತಿಸಿದರು. ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರದ ಹಿಂದಿನ ಕುಲಪತಿಗಳಾದ ಪ್ರೊ. ಮೀನಾ ಚಂದಾರ್ವಕರ್ ಅವರು ಉದ್ಘಾಟಿಸಿ, ಪಠ್ಯಕ್ರಮ ವಿನ್ಯಾಸ ಹಾಗೂ ವಿಷಯ ಅಭಿವೃದ್ಧಿ ಅತಿ ಜವಾಬ್ದಾರಿಯ ಕೆಲಸ ಹಾಗೂ ಇದನ್ನು ಸಿದ್ಧಪಡಿಸುವಲ್ಲಿ ಅಧ್ಯಾಪಕರ ಪಾತ್ರ ಮುಖ್ಯವಾದದ್ದು. ಪಠ್ಯಕ್ರಮ ವಿನ್ಯಾಸ ಹಾಗೂ ವಿಷಯ ಅಭಿವೃದ್ಧಿ ಮಾಡುವಾಗ ವಿ.ವಿ.ಯ ದೂರದೃಷ್ಟಿ ಮತ್ತು ಗುರಿಗಳನ್ನು ಗಮನದಲ್ಲಿರುಸುವಂತೆ ಮತ್ತು ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಅಂಶಗಳನ್ನು ಎಲ್ಲ ವಿಷಯಗಳಲ್ಲಿ ಪರಿಚಯಿಸುವಂತೆ ಕಿವಿಮಾತು ಹೇಳಿದರು.

ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡುತ್ತ, ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ ಮಾಡುವವರೆಗೆ ನಡೆದು ಬಂದ ಹಾದಿಯನ್ನು ವಿವರಿಸುತ್ತಾ, ಎನ್.ಇ.ಪಿ.ಗೆ ಒಡ್ಡಿಕೊಳ್ಳುವ ಕಡೆಗೆ ಪ್ರಯಾಣವು 2017ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕರಡು NAACನ ಸಮಿತಿಗೆ ಸಲಹೆಗಾರನಾಗಿ ಕಾರ್ಯನಿರ್ವಹಿಸುವಾಗ ದೊರೆತ ಅವಕಾಶವನ್ನು ಸ್ಮರಿಸಿದರು. ಪ್ರತಿಬದಲಾವಣೆಯಲ್ಲೂ, ಪ್ರತಿ ಬೀಳುವ ಎಲೆಯಲ್ಲೂ ಸ್ವಲ್ಪ ನೋವು ಮತ್ತು ಸೌಂದರ್ಯವಿದೆ ಹೀಗೆ ಹೊಸ ಎಲೆ ಚಿಗುರೊಡೆಯುವುದು ಎಂದು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನದಲ್ಲಿನ ಅವಕಾಶಗಳನ್ನು ಮಾರ್ಮಿಕವಾಗಿ ವಿಶ್ಲೇಷಿಸಿದರು. ಹಾಗೆ ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನದ ಪೂರ್ವ ತಯಾರಿಯಾಗಿ ಕೈಗೊಂಡ ಚಟುವಟಿಕೆಗಳನ್ನು ಕಾಲಾನುಕ್ರಮದಲ್ಲಿ ಪ್ರಸ್ತುತ ಪಡಿಸಿದರು.

1. ದಿನಾಂಕ 14.08.2020 ರಂದು ಕ.ರಾ.ಗ್ರಾ ಮತ್ತು ಪಂ.ರಾ.ವಿ.ವಿ., ಗದಗ ಮತ್ತು ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ ಬೆಂಗಳೂರು, ಮಹಾತ್ಮ ಗಾಂಧಿ ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯೂಕೇಶನ್, ಹೈದ್ರಾಬಾದ್, ಇನ್ಸಿಟ್ಯೂಟ್ ಫಾರ್ ಸೋಶಿಯಲ್ ಚೇಂಜ್, ಬೆಂಗಳೂರು, ಸೆಂಟ್ರಲ್ ಯುನಿರ್ವಸಿಟಿ, ಕೇರಳ, ರಾಣಿಚೆನ್ನಮ್ಮ ವಿ.ವಿ., ಬೆಳಗಾವಿ, ವಿಜಯನಗರ ಶ್ರೀಕೃಷ್ಣದೇವರಾಯ ವಿ.ವಿ., ಬಳ್ಳಾರಿ, ಇರ್ಮಾ ವಿ.ವಿ., ಅಹಮದಾಬಾದ್ ಹಾಗೂ ಅಜೀಮ್ ಪ್ರೇಮಜಿ ವಿ.ವಿ., ಬೆಂಗಳೂರು ಇವರುಗಳ ಸಹಯೋಗದೊಂದಿಗೆ "NEP 2020: Futuristic Policy for Aspiring Minds" ಎಂಬ ವಿಷಯದ ಮೇಲೆ ರಾಷ್ಟ್ರ ಮಟ್ಟದ ಇ–ಸಮಾವೇಶವನ್ನು ಆಯೋಜಿಸಲಾಯಿತು. ಈ ಸಮಾವೇಶದಲ್ಲಿ ಪ್ರೊ. ಎಂ. ಕೆ. ಶ್ರೀಧರ, ಸದಸ್ಯರು, ರಾಷ್ಟ್ರೀಯ ಶಿಕ್ಷಣ ನೀತಿ 2020 ಕರಡು ಸಮಿತಿ, ಪ್ರೊ. ಟಿ. ವಿ. ಕಟ್ಟಿಮನಿ, ಸದಸ್ಯರು, ರಾಷ್ಟ್ರೀಯ ಶಿಕ್ಷಣ ನೀತಿ 2020 ಕರಡು ಸಮಿತಿ, ಪ್ರೊ. ಅನುರಾಗ ಬೇಹರ, ರಾಷ್ಟ್ರೀಯ ಶಿಕ್ಷಣ ನೀತಿ 2020 ಕರಡು ಸಮಿತಿ ಹಾಗೂ ಪ್ರೊ. ಶಕೀಲಾ ಶಮ್ಸು, ಮಾಜಿ ವಿಶೇಷಾಧಿಕಾರಿಗಳು (ರಾಷ್ಟ್ರೀಯ ಶಿಕ್ಷಣ ನೀತಿ 2020), MHRD ಭಾಗವಹಿಸಿ ತಮ್ಮ ಅನುಭವಗಳನ್ನು ವಿವರಿಸಿದರು.

2. ಕ.ರಾ.ಗ್ರಾ ಮತ್ತು ಪಂ.ರಾ.ವಿ.ವಿ., ಗದಗ ಮತ್ತು ನೀತಿ ಆಯೋಗ ಹಾಗೂ ಭಾರತೀಯ ಶಿಕ್ಷಣ ಮಂಡಳಿ, ಕರ್ನಾಟಕ (ಉತ್ತರ) ಇವರುಗಳ ಸಹಯೋಗದೊಂದಿಗೆ ದಿನಾಂಕ 27.02.2021 ರಂದು "The Role of Teachers in Implementation of NEP 2020" (Awareness, Orientation, Challenges and Responses) ಎಂಬ ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಈ ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ ಶ್ರೀ. ವಿನಾಯಕ ಜೋಶಿ, ಸಂಚಾಲಕರು, ರಾಷ್ಟ್ರೀಯ ಶಿಕ್ಷಣ ನೀತಿ, ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ. ಟಿ. ವಿ. ಕಟ್ಟಿಮನಿ, ಸದಸ್ಯರು, ರಾಷ್ಟ್ರೀಯ ಶಿಕ್ಷಣ ನೀತಿ 2020 ಕರಡು ಸಮಿತಿ ಇವರುಗಳು ಭಾಗವಹಿಸಿದರು.

3. ದಿನಾಂಕ 14.07.2021 ರಂದು ಆಂತರಿಕ ಗುಣಮಟ್ಟ ಭರವಸೆ ಕೋಶ, ಕ.ರಾ.ಗ್ರಾ ಮತ್ತು ಪಂ.ರಾ.ವಿ.ವಿ., ಗದಗ ಮತ್ತು ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ ಬೆಂಗಳೂರು, ಇವರುಗಳ ಸಹಯೋಗದೊಂದಿಗೆ ಒಂದು ದಿನದ ಕಾರ್ಯಗಾರವನ್ನು "Implementation of NEP 2020 in KSRDPR University" ಎಂಬ ವಿಷಯದ ಕುರಿತು ಆಯೋಜಿಸಲಾಗಿತ್ತು. ಈ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ. ಎಂ. ಕೆ. ಶ್ರೀಧರ, ಸದಸ್ಯರು, ರಾಷ್ಟ್ರೀಯ ಶಿಕ್ಷಣ ನೀತಿ 2020 ಕರಡು ಸಮಿತಿ, ಡಾ. ರಾಜೇಂದ್ರ ಕುಮಾರ ಜೋಶಿ, ಹಿರಿಯ ಶಿಕ್ಷಣ ಸಲಹೆಗಾರರು, CESS, ಬೆಂಗಳೂರು ಮತ್ತು ಡಾ. ಪದ್ಮಾವತಿ ಬಿ. ಎಸ್., ಪ್ರಾಧ್ಯಾಪಕರು, CESS, ಬೆಂಗಳೂರು ಭಾಗವಹಿಸಿದ್ದರು.

4. NEP ಅಡಿಯಲ್ಲಿ ಕೋರ್ಸುಗಳನ್ನು ಆಯ್ಕೆ ಮತ್ತು ಅಂತಿಮಗೊಳಿಸಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ಆಂತರಿಕ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

5. ಅನುಕ್ರಮವಾಗಿ ದಿನಾಂಕ 20.07.2021 ಮತ್ತು 23.07.2021 ರಂದು ಜರುಗಿದ ಶೈಕ್ಷಣಿಕ ಪರಿಷತ್ ಮತ್ತು ಕಾರ್ಯನಿರ್ವಾಹಕ ಪರಿಷತ್ ಸಭೆಗಳಲ್ಲಿ ಈ ಕೆಳಗಿನ ಒಟ್ಟು ಐದು ಗೌರವ ಪದವಿಗಳನ್ನು ಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಅನುಮೋದನೆ ನೀಡಲಾಯಿತು.

- B.A. (Honors) in Rural Development and Governance
- B.Sc. (Honors) in Agribusiness & Food Processing
- B.Sc. (Honors) in Geoinformatics & Computer Science
- B.Sc. (Honors) in Public Health & Social Work
- B.Com. (Honors) in Innovation & Startups

6. ಪ್ರೊ. ಟಿ. ವಿ. ಕಟ್ಟಿಮನಿ, ಕುಲಪತಿಗಳು, ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ಆಂಧ್ರಪ್ರದೇಶ ಇವರ ಅಧ್ಯಕ್ಷತೆಯಲ್ಲಿ Course Contents ವಿನ್ಯಾಸ ಮಾಡಲು ಮತ್ತು ಪ್ರೊ. ಎಸ್. ಎಸ್. ಹೂಗಾರ, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ Ordinance/ Guidelines ರಚಿಸಲು ಸಲಹಾ ಸಮಿತಿಯನ್ನು ರಚಿಸಲಾಯಿತು. ಸಲಹಾ ಸಮಿತಿಯ ಸದಸ್ಯರಾಗಿ ಡಾ. ಪ್ರಕಾಶ್ ಭಟ್ ಸದಸ್ಯರು ಕಾರ್ಯನಿರ್ವಾಹಕ ಪರಿಷತ್ತು, ಕೆ.ಎಸ್.ಆರ್.ಡಿ.ಪಿ.ಆರ್.ಯು., ಡಾ. ಅರುಣ ಪಾಟೀಲ, ಸದಸ್ಯರು ಕಾರ್ಯನಿರ್ವಾಹಕ ಪರಿಷತ್ತು, ಕೆ.ಎಸ್.ಆರ್.ಡಿ.ಪಿ.ಆರ್.ಯು., ಡಾ. ಅಬ್ದುಲ ಅಜೀಜ್ ಮುಲ್ಲಾ ಸಹಾಯಕ ನಿರ್ದೇಶಕರು, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ, ಕೆ.ಎಸ್.ಆರ್.ಡಿ. ಪಿ.ಆರ್.ಯು., ಶ್ರೀ ಗಿರೀಶ ದೀಕ್ಷೀತ್ ಸಹಾಯಕ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ, ಕೆ.ಎಸ್.ಆರ್.ಡಿ.ಪಿ.ಆರ್.ಯು. ಮತ್ತು ಸಂಯೋಜಕರಾಗಿ ಡಾ. ಅಭಯಕುಮಾರ ಗಸ್ತಿ ಸಂಯೋಜಕರು, ಆಂತರಿಕ ಗುಣಮಟ್ಟ ಭರವಸೆ ಕೇಂದ್ರ, ಕೆ.ಎಸ್.ಆರ್.ಡಿ.ಪಿ.ಆರ್.ಯು. ಗದಗ ಇವರುಗಳು ಕಾರ್ಯನಿರ್ವಹಿಸಿದರು.

7. ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ., ಗದಗ ಮತ್ತು ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ ಬೆಂಗಳೂರು, ಇವರುಗಳ ಸಹಯೋಗದೊಂದಿಗೆ ಪದವಿಪೂರ್ವ ವಿದ್ಯಾರ್ಥಿ ಹಾಗೂ ಪಾಲಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಪ್ರೊ. ಬಿ. ತಿಮ್ಮೇಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಪ್ರೊ. ಟಿ.ವಿ. ಕಟ್ಟಿಮನಿ, ಕುಲಪತಿಗಳು, ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ಆಂಧ್ರಪ್ರದೇಶ, ಡಾ. ರಾಜೇಂದ್ರ ಕುಮಾರ ಜೋಶಿ, ಹಿರಿಯ ಶಿಕ್ಷಣ ಸಲಹೆಗಾರರು, CESS, ಬೆಂಗಳೂರು ಮತ್ತು ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಪತಿಗಳು, ಕ.ರಾ.ಗ್ರಾ ಮತ್ತು ಪಂ.ರಾ.ವಿ.ವಿ., ಗದಗ ಇವರುಗಳು ಮುಖ್ಯ ಸಂವಾದಕರುಗಳಾಗಿ ಭಾಗವಹಿಸಿದರು.

8. ವಿ.ವಿ.ಯ ವಿವಿಧ ಹಂತಗಳ ಚರ್ಚೆಯ ಬಳಿಕ ಪದವೀಧರರ ಗುಣಲಕ್ಷಣಗಳನ್ನು (Graduate Attributes) UGC ಮತ್ತು ರಾಜ್ಯ ಸರ್ಕಾರದ ನಿರ್ದೇಶನದಂತೆ ರಚಿಸಲಾಯಿತು.

**GRADUATE ATTRIBUTES**

- Disciplinary Knowledge and skills to ensure Sustainable Rural Development
- Life-Skills for improved quality of life
- Inclusive Growth through the decentralised approach
- Entrepreneurship and Employability
- Application of ICT and E-Governance for Rural Transformation
- Inculcating National and Socio-Cultural Values
- Protection and Promotion of Environment
- Multidisciplinary and Collaborative Approach
- Co-operation and Team Work
- Scientific Temper, Research Aptitude and Research Ethics
- Socio-Political Leadership

9. ಅಂತಿಮಗೊಳಿಸಿದ ಗೌರವ ಪದವಿ ಕೋರ್ಸುಗಳ ಪಠ್ಯಕ್ರಮ ವಿನ್ಯಾಸ ಮತ್ತು ರಚನೆ ಮಾಡಲು ಐದು ಕಾರ್ಯಕಾರಿ ಗುಂಪುಗಳನ್ನು ರಚಿಸಲಾಯಿತು. ಅಲ್ಲದೆ ಭಾಷೆ ಮತ್ತು ಕೌಶಲ್ಯಾಧಾರಿತ ವಿಷಯಗಳಿಗೆ ಪ್ರತ್ಯೇಕ ತಂಡಗಳನ್ನು ರಚನೆ ಮಾಡಲಾಯಿತು.

10. ಪಠ್ಯಕ್ರಮ ವಿನ್ಯಾಸ ಮತ್ತು ರಚನೆ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯಕ್ಕೆ ಮುಖ್ಯವಾಗಿ ಈ ಕೆಳಗಿನ ಅಂಶಗಳಿಗೆ ಗಮನ ನೀಡುವಂತೆ ಸೂಚಿಸಲಾಯಿತು.

a. Rural Development

b. Basic Agriculture and Allied Activities

c. Rural Immersion

d. Students Internship

e. Project Work

f. Digital Literacy Skills

g. Communication Skills

h. Vocational Skills

i. Environmental Studies and Indian Constitution

j. Moral and Ethical Values

ಕೊನೆಯಲ್ಲಿ ಕಾರ್ಯಗಾರಕ್ಕೆ ಆಗಮಿಸಿದ ಎಲ್ಲ ಗೌರವ ಪ್ರಾಧ್ಯಪಕರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಾ ತಮ್ಮ ಪ್ರಾಸ್ತಾವಿಕ ನುಡಿಯನ್ನು ಸಮಾಪ್ತಗೊಳಿಸಿದರು.

ನಂತರ ವಿಶ್ವವಿದ್ಯಾಲಯದ "Knowledge Partner" ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ ಬೆಂಗಳೂರಿನಿಂದ ಆಗಮಿಸಿದ ಡಾ. ರಾಜೇಂದ್ರ ಕುಮಾರ ಜೋಶಿ ಮತ್ತು ಡಾ. ಪದ್ಮಾವತಿಯವರು ಕಾರ್ಯಗಾರಕ್ಕೆ ಆಗಮಿಸಿದ ಎಲ್ಲ ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೂ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮತ್ತು ವಿಶ್ವವಿದ್ಯಾಲಯದ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಉತ್ತಮ ಗುಣಮಟ್ಟದ ಪಠ್ಯಕ್ರಮವನ್ನು ಸಿದ್ದಪಡಿಸಲು ಬೇಕಾಗುವ ಸಲಹೆ ಮತ್ತು ಸೂಚನೆಗಳನ್ನು ಒದಗಿಸಿದರು.

ಒಟ್ಟು ಮೂರು ದಿನ ಜರುಗಿದ ಈ ಕಾರ್ಯಗಾರದಲ್ಲಿ ವಿ.ವಿ.ಯ ಅಧ್ಯಾಪಕರು, ಗೌರವ ಪ್ರಾಧ್ಯಾಪಕರು, ಬೇರೆ ಬೇರೆ ವಿಶ್ವವಿದ್ಯಾಲಯಗಳ ಅಧ್ಯಾಪಕರುಗಳು, ಪದವಿ ಕಾಲೇಜುಗಳ ಪ್ರಾಧ್ಯಾಪಕರು ಮತ್ತು ಕೈಗಾರಿಕಾ ಪರಿಣಿತರು ಭಾಗವಹಿಸಿ ಐದು ಗೌರವ ಪದವಿಗಳಿಗೆ ಉತ್ತಮ ಪಠ್ಯಕ್ರಮವನ್ನು ವಿನ್ಯಾಸ ಮಾಡುವದರ ಜೊತೆಗೆ ಕಲಿಕೆಗೆ ಪೂರಕವಾಗುವ ಬೋಧಕ ಪರಿಕರಗಳ ಮಾಹಿತಿಯನ್ನು ನೀಡಿ ಕಾರ್ಯಗಾರವನ್ನು ಯಶಸ್ವಿಗೊಳಿಸಿದರು.

ಈ ಕಾರ್ಯಗಾರದ ಯಶಸ್ವಿಗೆ ಸಹಕರಿಸಿದ ಎಲ್ಲ ಬೋಧಕ, ಬೋಧಕೇತರ ಹಾಗೂ ಆಡಳಿತ ಸಿಬ್ಬಂದಿ ಮತ್ತು ವಿವಿಧ ಕ್ಷೇತ್ರಗಳ ಪರಿಣಿತರಿಗೆ ಆಂತರಿಕ ಗುಣಮಟ್ಟ ಭರವಸೆಕೋಶದ ಪರವಾಗಿ ಕುಲಪತಿಗಳು ಧನ್ಯವಾದಗಳನ್ನು ತಿಳಿಸಿದರು.

ವಿಶೇಷ ಲೇಖನ



**ಡಾ. ಸಂತೋಷ್ ಕುಮಾರ್**
ಅಧ್ಯಾಪಕರು,
ಸಾರ್ವಜನಿಕ ಆಡಳಿತ ವಿಭಾಗ,
ಕ.ರಾ.ಗ್ರಾ. ಮತ್ತು ಪಂ.ರಾಜ್,
ವಿಶ್ವವಿದ್ಯಾಲಯ, ಗದಗ

# ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಉನ್ನತ ಶಿಕ್ಷಣ

ಭಾರತ ಸರ್ಕಾರವು ಜುಲೈ 29, 2020 ರಂದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತು. ಶೈಕ್ಷಣಿಕ, ಬೌದ್ಧಿಕ ಮತ್ತು ಸಾರ್ವಜನಿಕ ವಲಯಲ್ಲಿ ಶಿಕ್ಷಣ ನೀತಿಯ ಪೂರ್ವಾಪರಗಳ ಕುರಿತು ವ್ಯಾಪಕ ಚರ್ಚೆಯೂ ಆಯಿತು. ಭಾರತದಲ್ಲಿ ಜಾರಿಗೆ ಬಂದಿರುವ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿ ಇದಾಗಿದೆ. ಪ್ರಥಮ ಬಾರಿಗೆ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಂತಹ ಸಂದರ್ಭದಲ್ಲಿ ಕೊಥಾರಿ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಿ 1968 ರಲ್ಲಿ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದರು. ಇದರಲ್ಲಿ ಕಲಿಕಾ ಭಾಷೆಯ ಕುರಿತು ಹೆಚ್ಚಿನ ಆಸಕ್ತಿ ವಹಿಸಲಾಗಿತ್ತು ಹಾಗು 14 ವರ್ಷ ವಯೋಮಾನದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು. ಇದಾದ ನಂತರ 1986 ರಲ್ಲಿ ರಾಜೀವ ಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಎರಡನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಯಿತು. ಇದರಲ್ಲಿ ಪ್ರಮುಖವಾಗಿ ಶಿಕ್ಷಣದ ಸಮಾನ ಅವಕಾಶದ ಮತ್ತು ಸಾಮಾಜಿಕ ಸಮಗ್ರತೆಯ ಕಡೆಗೆ ಹೆಚ್ಚು ಒತ್ತನ್ನು ನೀಡಲಾಗಿತ್ತು. ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಎಲ್ಲರಂತೆಯೇ ಶಿಕ್ಷಣವನ್ನು ಪಡೆಯುವುದು ಮಹತ್ತರ ವಿಷಯವಾಗಿತ್ತು. ಎರಡನೇ ಶಿಕ್ಷಣ ನೀತಿಯ ಅನುಷ್ಠಾನದ 36 ನಂತರ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020ರಲ್ಲಿ ಜಾರಿಗೆ ತರಲಾಯಿತು.

2020ರ ರಾಷ್ಟ್ರೀಯ ಶಿಕ್ಷಣ ನೀತಿಯು ನಿರ್ದಿಷ್ಟವಾಗಿ ಮಹತ್ತರ ಬದಲಾವಣೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ತರುವ ಉದ್ದೇಶವನ್ನು ಹೊಂದಿದೆ. ಶಿಕ್ಷಾ ಪ್ರವೇಶದಿಂದ ಉನ್ನತ ಶಿಕ್ಷಣದವರೆಗೂ ನವೀನ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೌಶಲ್ಯಯುತ ಸಮೂಹವನ್ನು ಕಟ್ಟುವ ಉದ್ದೇಶವನ್ನು ಹೊಂದಲಾಗಿದೆ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣದ ಕುರಿತು ಶಿಕ್ಷಣ ನೀತಿ ಹೊಂದಿರುವ ಉದ್ದೇಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ, ಬಹುಶಿಸ್ತೀಯ ಅಧ್ಯಯನ, ವಿವಿಧ ಹಂತಗಳಲ್ಲಿ ಪ್ರವೇಶ ಮತ್ತು ನಿರ್ಗಮನ, ಕೌಶಲ್ಯಾಧಾರಿತ ಶಿಕ್ಷಣ, ಹಾಗೂ ಮಾತೃಭಾಷೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಈ ಶಿಕ್ಷಣ ನೀತಿಯು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತದೆ.

ಉನ್ನತ ಶಿಕ್ಷಣ ಎಂಬುದು ಪದವಿ ಕೋರ್ಸುಗಳನ್ನು ಮುಗಿಸಿದ ತರುವಾಯ ವಿಶ್ವವಿದ್ಯಾಲಯಗಳಲ್ಲಿರುವ ಸ್ನಾತಕೋತ್ತರ ಪದವಿಗಳು ಮಾತ್ರ ಎನ್ನುವ ನಂಬಿಕೆ ಈವರೆಗೂ ಅಸ್ತಿತ್ವದಲ್ಲಿತ್ತು. ಪಿಯುಸಿವರೆಗಿನ ಶಿಕ್ಷಣ ಮಾಧ್ಯಮಿಕ ಹಂತದ ಶಿಕ್ಷಣ ಎಂದು ಪರಿಗಣಿಸಲ್ಪಟ್ಟಿದ್ದರೆ, ಸ್ನಾತಕೋತ್ತರ ಪದವಿಗಳು ಉನ್ನತ ಶಿಕ್ಷಣ ಎಂದು ಪರಿಗಣಿಸಲ್ಪಟ್ಟಿದ್ದವು. ಆದರೆ ಇವುಗಳ ನಡುವೆ ಇದ್ದಂತಹ ಪದವಿ ಶಿಕ್ಷಣ ಅತ್ತವೂ ಇಲ್ಲ ಇತ್ತವೂ ಇಲ್ಲ ಎನ್ನುವ ಸ್ಥಿತಿಯಲ್ಲಿದ್ದವು. ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ಶಿಕ್ಷಣವನ್ನು ಬಿಟ್ಟರೆ ಪದವಿ ಕೋರ್ಸುಗಳನ್ನು ಮಾಡುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಹೋಲಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಾರೆ. ಆದರೆ ಆ ಹಂತದ ಶಿಕ್ಷಣವೇ ನಗಣ್ಯವಾಗಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಯಾವ ಹಂತದಲ್ಲಿ ಕೌಶಲ್ಯಗಳನ್ನು ಕಲಿತು ಉದ್ಯೋಗಗಳು ಅರಸಿ ಬರಬೇಕಿತ್ತೋ ಅಂತಹ ಕಾರ್ಯ ಸಾಧ್ಯವಾಗದಿದ್ದುದು ನಮ್ಮ ವ್ಯವಸ್ಥೆ ಅದನ್ನು ನಿರ್ಲಕ್ಷಿಸಿರುವುದಕ್ಕೆ ನಿದರ್ಶನವಾಗಿದೆ. ಆದರೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅಂತಹ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಿ, ಪದವಿಯನ್ನು ಮತ್ತು ಉನ್ನತ ಶಿಕ್ಷಣವನ್ನು ಸಂಯೋಜನೆ ಮಾಡಿ ನಾಲ್ಕು ವರ್ಷದ ಗೌರವ ಪದವಿ ಎನ್ನುವ ಯೋಜನೆಯನ್ನು ತಂದಿರುವುದು ಉತ್ತಮವಾದ ಬೆಳವಣಿಗೆ. ಜೀವನದ ದಿಕ್ಕು ಬದಲಾಯಿಸುವ ಹಂತವನ್ನೇ ಮುಖ್ಯವಾಗಿ ಪರಿಗಣಿಸಿ ಅಲ್ಲಿರುವ ವಿದ್ಯಾರ್ಥಿಗಳು ಕೌಶಲ್ಯಪೂರ್ಣರಾಗಿ ಹೊರಹೊಮ್ಮಿಸುವ ಪ್ರಯತ್ನ ಮಾಡಬೇಕಿರುವುದು ಇಂದಿನ ವಾಸ್ತವ.

ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಅರ್ಥಮಾಡಿಕೊಳ್ಳಲು ನಾವು ಇನ್ನೆರಡು ಸಂಗತಿಗಳನ್ನು ಪ್ರಧಾನವಾಗಿ ಗಮನಿಸಬೇಕಾಗುತ್ತದೆ. ಮೊದಲನೆಯದು ಭಾರತಕ್ಕೆ ಬ್ರಿಟೀಷರು ಬರುವ ಮುನ್ನ ಇದ್ದಂತಹ ಶಿಕ್ಷಣ ನೀತಿ ಹಾಗೂ ಎರಡನೆಯದು 19ನೇ ಶತಮಾನದಲ್ಲಿ ಪ್ರಾರಂಭವಾದ ಹಂಬೋಲ್ಟನ್ ಉನ್ನತ ಶಿಕ್ಷಣ ಮಾದರಿ.

ಪ್ರಾಚೀನ ಭಾರತೀಯ ಶೈಕ್ಷಣಿಕ ಎಂದರೆ ಬಹುತೇಕರು ತಿರಸ್ಕಾರ ಭಾವದಿಂದ ನೋಡುತ್ತಾರೆ. ಏಕೆಂದರೆ ಕಳೆದ 200 ವರ್ಷಗಳಿಂದ ಪಡೆದ ಬ್ರಿಟೀಷರ ಶಿಕ್ಷಣವು ಭಾರತೀಯ ಜೀವನ ಶೈಲಿಯನ್ನು ಮರೆಮಾಚುವ ಮತ್ತು ತಿರಸ್ಕಾರ ಭಾವದಿಂದ ನೋಡುವ ಮನೋಭಾವವನ್ನು ಅಪ್ರಜ್ಞಾಪೂರ್ವಕವಾಗಿ ನಮ್ಮಲ್ಲಿ ಬಿತ್ತಿದೆ. ಆದ್ದರಿಂದ ಪಾಶ್ಚಾತ್ಯರ ದೃಷ್ಟಿಕೋನದಿಂದಾಚೆಗೆ ನಮ್ಮನ್ನು ನಾವು ಅರ್ಥಮಾಡಿ ಕೊಳ್ಳುವ ಪ್ರಕ್ರಿಯೆ ಇಂದಿನ ತುರ್ತಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಮತ್ತದೆ ಹಳೆಯ ಸಂಪ್ರದಾಯವನ್ನು ಮರುಸ್ಥಾಪಿಸುವ ಉದ್ದೇಶವನ್ನು ಹೊಂದಿದೆ ಎಂದು ನಾವು ಅಪಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ, ಅದರ ಬದಲಿಗೆ ಅಂದಿನ ಶಿಕ್ಷಣದಲ್ಲಿದ್ದ ಮೌಲ್ಯಗಳನ್ನು, ಪರಿಣಿತಿಗಳನ್ನು ಹಾಗೂ ಜೀವನ ಕೌಶಲ್ಯವನ್ನು ಬೆಳಕಿಗೆ ತರುವ ಒಂದು ಪ್ರಯತ್ನವಾಗಿದೆ. ವೇದ, ವಿಜ್ಞಾನ ಗಣಿತಗಳನ್ನು ಹಾಗೂ ಕೆಲವು ಪ್ರಾಯೋಗಿಕ ವಿದ್ಯೆಗಳನ್ನು ಕಲಿಸುವ ಪದ್ಧತಿ ನಮ್ಮಲ್ಲಿತ್ತು. ಇಂದು ಬಹುಶಿಸ್ತೀಯ ಅಧ್ಯಯನದ ಕುರಿತು ಕೇಳಿ ಬರುತ್ತಿರುವ ಕೂಗು ನಮ್ಮಲ್ಲಿ ಪ್ರಾಯೋಗಿಕವಾಗಿಯೇ ಬಹು ಹಿಂದೆಯೇ ಅಸ್ತಿತ್ವದಲ್ಲಿತ್ತು. ಜೀವನಕ್ಕೆ ಅಗತ್ಯವಿರುವ ಕೌಶಲ್ಯಗಳನ್ನು ಕಲಿಸುವುದೇ ಅಂದಿನ ಶಿಕ್ಷಣದ ಪ್ರಧಾನ ಆಶಯವಾಗಿತ್ತು. ಶಾಸ್ತ್ರಗಳ ಮೂಲಕ ಕೌಶಲ್ಯವನ್ನು, ಕಾವ್ಯಗಳ ಮೂಲಕ ಕಲ್ಪನಾ ಶಕ್ತಿಯನ್ನು, ಇತಿಹಾಸ ಮತ್ತು ತರ್ಕಗಳ ಮೂಲಕ ಬುದ್ಧಿಶಕ್ತಿಯನ್ನು ಹಾಗೂ ಮಿಮಾಂಸೆಗಳ ಮೂಲಕ ನಿರೂಪಣೆ ಅಥವಾ ಭಾಷ್ಯಗಳನ್ನು ಕಲಿಸುವ, ಮತ್ತು ವರ್ತದ ಮೂಲಕ ಕೃಷಿ, ವ್ಯಾಪಾರ, ಪಶುಸಂಗೋಪನೆಯಂತಹ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ಇದರ ಮೂಲಕ ಜೀವನಕ್ಕೆ ಅಗತ್ಯವಿರುವ ಸರ್ವವಿದ್ಯೆಗಳನ್ನು ವಿವಿಧ ಹಂತಗಳಲ್ಲಿ ಕಲಿಸುವ ಮೂಲಕ ಶಿಕ್ಷಣವು ಜೀವನ ವಿಧಾನವನ್ನು ರೂಪಿಸುವ ಕಾರ್ಯವನ್ನು ಮಾಡುತ್ತಿತ್ತು. ನಳಂದ, ತಕ್ಷಶಿಲೆಯಂತಹ ವಿಶ್ವವಿದ್ಯಾಲಯಗಳಿಗೆ ವಿದೇಶಿ ಯಾತ್ರಿಕರು ಭೇಟಿ ನೀಡುವ ಮೂಲಕ ಅಲ್ಲಿದ್ದಂತಹ ಪದ್ಧತಿಯ ಮಹತ್ವವನ್ನು ತಿಳಿಸಿರುವುದು ನಮ್ಮ ಪೂರ್ವಿಕರು ಶಿಕ್ಷಣ ಪದ್ಧತಿಯನ್ನು ಬೆಳೆಸಿದ್ದಂತಹ ಪರಿ ಆಶ್ಚರ್ಯಚಕಿತರನ್ನಾಗಿ ಮಾಡಿಸುತ್ತದೆ. ಆದರೆ ಇಂತಹ ವೈಧಾನಿಕತೆ ಮೆಕಾಲೆಯ ಶಿಕ್ಷಣ ಬಂದ ತರುವಾಯ ಮೂಲೆಗುಂಪಾಯಿತು ಎನ್ನುವುದು ಸತ್ಯ.

ಭಾರತವು ಇಂತಹ ಶಿಕ್ಷಣ ಪದ್ಧತಿಯನ್ನು ರೂಢಿಸಿಕೊಂಡ ಹಲವಾರು ಶತಮಾನದ ನಂತರ ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಜ್ಞಾನೋದಯವಾಯಿತು. ಅದರಲ್ಲಿಯೂ ವಿಶೇಷವಾಗಿ 19ನೇ ಶತಮಾನದ ಆದಿಯಲ್ಲಿ ಉನ್ನತ ಶಿಕ್ಷಣದ ಕುರಿತು ಹಲವಾರು ಚಿಂತನೆಗಳು ಜರ್ಮನಿಯಲ್ಲಿ ಉದಯಿಸಿದವು. ಅದರಲ್ಲಿ ಪ್ರಮುಖವಾಗಿ ಹಂಬೋಲ್ಟನ್ ಮಾದರಿಯನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲು ಪ್ರಾರಂಭವಾಯಿತು. ಈ ಮಾದರಿಯ ಪ್ರಕಾರ ಶಿಕ್ಷಣವು ಸಂಶೋಧನೆ ಮತ್ತು ಅಧ್ಯಯನದ ಸಮ್ಮಿಲನವಾಗಿ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿರಬೇಕು ಎಂದು ಪ್ರತಿಪಾದಿಸಿತು. ಈ ಮಾದರಿಯನ್ನು ವಿಲಿಯಮ್ ವೊನ್ ಹಂಬೋಲ್ಟ್ ಎನ್ನುವ ಪ್ರಶಿಯಾದ ದಾರ್ಶನಿಕರು ಪರಿಚಯಿಸಿದರು. ಬರ್ಲಿನ್‌ನಲ್ಲಿ ಇಂತಹ ಚಿಂತನೆಯನ್ನು ಇಟ್ಟುಕೊಂಡು ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ವಿಶ್ವವಿದ್ಯಾಲಯಲ್ಲಿ ವಿದ್ಯಾರ್ಥಿಗಳು ತಮ್ಮ ಇಚ್ಚೆಯ ವಿಷಯಗಳನ್ನು ಬಹುಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವಿತ್ತು. ಒಟ್ಟಿನಲ್ಲಿ ಸ್ವಾಯುತ್ತ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಮುಂದೆ ವಿಶ್ವನಾಗರಿಕರನ್ನಾಗಿ ಮಾಡುವ ಉದ್ದೇಶ ಈ ಮಾದರಿಯಲ್ಲಿತ್ತು. ಇಲ್ಲಿ ನಾವು ಗಮನಿಸಬೇಕಾದ ಸಂಗತಿ ಎಂದರೆ, ಭಾರತದಲ್ಲಿ ಪುರಾತನ ಕಾಲದಲ್ಲೇ ಇದ್ದಂತಹ ಶಿಕ್ಷಣ ಮಾದರಿಯು ಯುರೋಪಿನಲ್ಲಿ 19 ನೇ ಶತಮಾನದವರೆಗೂ ಇರಲಿಲ್ಲ ಎಂಬುದು ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಮೇಲಿನ ಎರಡೂ ನಿದರ್ಶನಗಳನ್ನು ನೋಡಿದ ನಂತರ ಹೊಸ ಶಿಕ್ಷಣ ನೀತಿಯನ್ನು ಒರೆಗೆ ಹಚ್ಚುವುದು ಹೆಚ್ಚು ಸೂಕ್ತ ಎಂದೆನಿಸುತ್ತದೆ. ಕಳೆದ 200 ವರ್ಷಗಳಿಂದ ಬೆಳೆದು ಬಂದಂತಹ ಮೆಕಾಲೆ ಶಿಕ್ಷಣ ಪದ್ಧತಿಯಲ್ಲಿ ಕಾಲಕ್ರಮೇಣ ಬಹುಶಿಸ್ತೀಯ ಅಧ್ಯಯನವು ಕಣ್ಮರೆಯಾಗತೊಡಗಿತು. ಅಧ್ಯಯನದ ವಿಷಯಗಳನ್ನು ಹಲವಾರು ವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಯಿತು. ಅವಿಭಕ್ತ ಕುಟುಂಬಗಳು ಒಡೆದು ಚೂರಾಗಿ ವಿಭಕ್ತ ಕುಟುಂಬಗಳಾದಂತೆ ವಿಷಯಗಳು ಸಣ್ಣ ಸಣ್ಣ ಚೂರುಗಳಾದವು. ಇದಕ್ಕೆ ಆಯಾ ವಿಷಯಗಳಲ್ಲಾದ ಸಂಶೋಧನೆಗಳು ಕಾರಣವಾಗಿದ್ದರೂ, ಕಾಲಾನಂತರದಲ್ಲಿ ವಿಷಯಗಳು ಕಟ್ಟುನಿಟ್ಟಾದ ಗೋಡೆಗಳನ್ನು ತಮ್ಮ ಸುತ್ತ ಹಾಕಿಕೊಂಡವು. ಇದಕ್ಕೆ ತಕ್ಕಂತೆ ಉನ್ನತ ಶಿಕ್ಷಣದ ಸಂಸ್ಥೆಗಳು ನೀತಿ ನಿಯಮಗಳನ್ನು ರೂಪಿಸಿ 75 ವರ್ಷಗಳಿಂದ ವಿಶ್ವವಿದ್ಯಾಲಯಗಳು ಅಚ್ಚುಕಟ್ಟಾಗಿ ಅವುಗಳನ್ನು ಪಾಲಿಸಿಕೊಂಡು ಬಂದವು. ಆದರೆ ಇದರ ಮೂಲಕ ವಿದ್ಯಾರ್ಥಿಗಳು ಹೆಚ್ಚೆಚ್ಚು ಕೂಪ ಮಂಡೂಕಗಳಾಗುತ್ತಾ

ಬಂದರು. ಈ ಹಿಂದೆ ಬಿಡುಗಡೆಯಾದ "ಫಸ್ಟ್ ರ್‍ಯಾಂಕ್ ರಾಜು" ಎಂಬ ಚಲನಚಿತ್ರ ಇಂತಹ ವ್ಯಂಗ್ಯ ಪರಿಸ್ಥಿತಿಯನ್ನು ಸೊಗಸಾಗಿ ಚಿತ್ರಿಸಿದೆ. ವಿದ್ಯಾರ್ಥಿಗಳನ್ನು ಪುಸ್ತಕದ ಹುಳಗಳನ್ನಾಗಿ ಮಾಡಿ ತಾವು ಬದುಕುತ್ತಿರುವ ಸಮಾಜದ ಕುರಿತು ಅಜ್ಞಾನಿಗಳನ್ನಾಗಿ ಬದಲಾಯಿಸಿತು. ವ್ಯಕ್ತಿಯು ಬದುಕನ್ನು ನಡೆಸಲು ಜ್ಞಾನ, ವಿಜ್ಞಾನದ ಜೊತೆಗೆ ಲೋಕಜ್ಞಾನವು ಮುಖ್ಯ ಎನ್ನುವ ಸಂಗತಿಯನ್ನು ಈ ವ್ಯವಸ್ಥೆಯು ಪ್ರಾಯಶಃ ಮರೆತಂತೆ ಕಾಣುತ್ತದೆ.

ಇಂತಹ ಕೂಪದಿಂದ ವಿದ್ಯಾರ್ಥಿಗಳನ್ನು ಹೊರತಂದು ಕೌಶಲ್ಯಯುಕ್ತ ಮತ್ತು ಸಾಮಾಜಿಕ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಇದರ ನೀತಿ ನಿಯಮಗಳು ಅಸ್ಪಷ್ಟ ಸ್ವರೂಪದಲ್ಲಿದ್ದರೂ ಆಶಯ ಮಾತ್ರ ಗಟ್ಟಿಯಾಗಿದೆ. ಭವಿಷ್ಯದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಹಾಗೂ ಅವರ ಜೀವನಕ್ಕೆ ಅಗತ್ಯವಿರುವ ಕೌಶಲ್ಯಗಳನ್ನು ಶಿಕ್ಷಣದಿಂದ ಪಡೆಯುವುದೇ ಈ ನೀತಿಯ ಮುಖ್ಯ ಗುರಿಯಾಗಿದೆ. ಇಂತಹ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ವಿಶ್ವವಿದ್ಯಾಲಯಗಳ ಕರ್ತವ್ಯವಾಗಿದೆ. ಹಾಗೂ ಹಲವಾರು ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಅಂತಹ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ಗದಗಿನ ವಿಶ್ವವಿದ್ಯಾಲಯವೂ ಒಂದಾಗಿದೆ.

ಗದಗ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ ಪದವಿ ಕೋರ್ಸುಗಳನ್ನು ಪ್ರಾರಂಭಿಸುತ್ತಿದೆ.. ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಕಲಾ ವಾಣಿಜ್ಯ ಮತ್ತು ವಿಜ್ಞಾನದದಲ್ಲಿ ತಮಗಿಚ್ಛಿಸಿದ ವಿಷಯಗಳ ಜೊತೆಗೆ ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಇತರ ವಿಷಯಗಳನ್ನು ಅಧ್ಯಯನ ಮಾಡಬಹುದಾಗಿದೆ. ನಾಲ್ಕು ವರ್ಷದ ಈ ಪದವಿ ಕೋರ್ಸಿನಲ್ಲಿ ವಿವಿಧ ಹಂತದ ಪ್ರವೇಶ ಮತ್ತು ನಿರ್ಗಮನದ ಅವಕಾಶಗಳಿವೆ. ಪದವಿಗೆ ಸೇರ್ಪಡೆಯಾಗಿ ಮೊದಲ ವರ್ಷ ಪೂರೈಸಿದರೆ ಸರ್ಟಿಫಿಕೇಟ್ ಕೋರ್ಸ್‌ನ್ನು ಪಡೆಯಬಹುದು, ಎರಡನೇ ವರ್ಷ ಪೂರೈಸಿದರೆ ಡಿಪ್ಲೋಮಾ ಕೋರ್ಸ್‌ನ್ನು ಪಡೆಯಬಹುದು, ಮೂರು ವರ್ಷ ಪೂರೈಸಿದರೆ ಅದನ್ನು ಪದವಿ ಎಂದು ಪರಿಗಣಿಸಲಾಗುತ್ತದೆ. ಹಾಗೂ ನಾಲ್ಕನೇ ವರ್ಷವನ್ನೂ ಪೂರೈಸಿದರೆ ಅದನ್ನು ಗೌರವ ಪದವಿ (ಹಾನರ್ಸ್) ಎಂದು ಪರಿಗಣಿಸಲಾಗುತ್ತದೆ. ನಾಲ್ಕು ವರ್ಷ ಗೌರವ ಪದವಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಯು ಕೇವಲ ಒಂದು ವರ್ಷ ಸ್ನಾತಕೋತ್ತರ ಪದವಿಯನ್ನು ಪಡೆದರೆ ಸಾಕಾಗುತ್ತದೆ. ಅಂದರೆ ಗೌರವ ಪದವಿ ಪಡೆದ ನಂತರ ಸ್ನಾತಕೋತ್ತರ ಪದವಿ ಕೇವಲ ಒಂದು ವರ್ಷ ಮಾತ್ರವಿರುತ್ತದೆ.

**ವಿಶ್ವವಿದ್ಯಾಲಯದಲ್ಲಿ ಪರಿಚಯಿಸುತ್ತಿರುವ ಕೋರ್ಸುಗಳ ಸಂಕ್ಷಿಪ್ತ ಮಾಹಿತಿ ಈ ಮುಂದಿನಂತಿದೆ;**

- ಬಿ.ಎ. ಗೌರವ ಪದವಿ– ಗ್ರಾಮೀಣಾಭಿವೃದ್ಧಿ ಮತ್ತು ಆಡಳಿತ,
- ಬಿ.ಎಸ್ಸಿ. ಗೌರವ ಪದವಿ– ಸಾರ್ವಜನಿಕ ಆರೋಗ್ಯ ಮತ್ತು ಸಮಾಜ ಕಾರ್ಯ,
- ಬಿ.ಎಸ್ಸಿ. ಗೌರವ ಪದವಿ– ಅಗ್ರಿಬಿಸಿನೆಸ್ ಮತ್ತು ಫುಡ್ ಪ್ರೊಸೆಸ್ಸಿಂಗ್
- ಬಿ.ಎಸ್ಸಿ. ಗೌರವ ಪದವಿ– ಜಿಯೋ ಇನ್ಫಾರ್ಮಾಟಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್
- ಬಿ.ಕಾಂ. ಗೌರವ ಪದವಿ– ಇನ್ನೋವೇಶನ್ ಮತ್ತು ಸ್ಟಾರ್ಟ್‌ಅಪ್

ಇದರೊಂದಿಗೆ ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್‌ನ್ನು ಯುಜಿಸಿಯು ಪರಿಚಯಿಸುತ್ತಿದ್ದು, ವಿದ್ಯಾರ್ಥಿಗಳು ಎಲ್ಲೇ ವಿದ್ಯಾಭ್ಯಾಸ ಮಾಡಿದರೂ ಆನ್ ಲೈನ್ ನಲ್ಲಿ ಅವರ ವಿದ್ಯಾಭ್ಯಾಸದ ಕ್ರೆಡಿಟ್ ಸೇರುತ್ತಾ ಹೋಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳ ಅಧ್ಯಯನ ಡಿಸ್ ಕಂಟಿನ್ಯೂ ಆಗುವುದಿಲ್ಲ. ಅವರು ಎಷ್ಟು ಕ್ರೆಡಿಟ್ ಪಡೆದಿರುತ್ತಾರೆ ಅದರ ಆಧಾರದ ಮೇಲೆ ಅವರು ಸರ್ಟಿಫಿಕೇಟ್, ಡಿಪ್ಲೋಮಾ, ಸ್ನಾತಕದಂತಹ ಪದವಿಗಳನ್ನು ಪಡೆದಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗಾಗಿ ಅಗತ್ಯವಿರುವ ಪಠ್ಯಕ್ರಮವನ್ನು ಯು ಜಿ ಸಿ ಯು ಮಾರ್ಗಸೂಚಿಯ ಅನುಸಾರ ಅಭಿವೃದ್ಧಿಪಡಿಸಲಾಗಿದೆ. ಒಟ್ಟಿನಲ್ಲಿ ಹೊಸ ಶಿಕ್ಷಣ ನೀತಿಯು ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಗುತ್ತಿರವ ಪದವಿ ಕೋರ್ಸುಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಹೆಚ್ಚಿನದಾಗಿ ಪಡೆಯುವ ಮೂಲಕ ಕೌಶಲ್ಯಯುಕ್ತ ವ್ಯಕ್ತಿಗಳಾಗಿ ಹೊರಹೊಮ್ಮಬಹುದಾಗಿದೆ.



## ವಿಶೇಷ ಸಮಾವೇಶ

# ಗೋ ಆಧಾರಿತ ಸಾವಯವ ಕೃಷಿ "ಪ್ರಾತ್ಯಕ್ಷಿಕೆ ಮತ್ತು ಸಂವಾದ" ದೇಸಿ ಯೋಜನೆಯ ಒಂದು ವರ್ಷದ ಕಾರ್ಯಾಗಾರದ ಒಂದು ನೋಟ

ಶ್ರೀ ಆನಂದಗೌಡ ಪಿ. ಫಕೀರಗೌಡ,
ಸಹಾಯಕ ಗ್ರಂಥಪಾಲಕರು,
ಕ.ರಾ.ಗ್ರಾ. ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ

### ಪೀಠಿಕೆ :

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016 ರನ್ವಯ ವಿಶ್ವವಿದ್ಯಾಲಯ ಸ್ಥಾಪನೆಗೆ ಅಧಿಸೂಚಿಸಲಾಯಿತು. ಬೋಧನೆ, ತರಬೇತಿ ಮತ್ತು ಅಧ್ಯಯನದ ಮೂಲಕ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಈ ಅಧಿನಿಯಮವು ಸ್ಥಳೀಯ ಸ್ವಯಂ ಸಂಸ್ಥೆಗಳ ಬಲಪಡಿಸುವಿಕೆ ಮತ್ತು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳ ಅಭ್ಯಾಸ ಮತ್ತು ಅಧ್ಯಯನ ಮಾಡುವುದರ ಮೂಲಕ ಸಮಗ್ರ ಅಭಿವೃದ್ಧಿ ಮಾಡುವ ಉದ್ದೇಶ ಹೊಂದಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದ್ದು, ಕರ್ನಾಟಕ ಗ್ರಾಮೀಣ ಪ್ರದೇಶವಾದ ಗದಗ ಇದರ ಕೇಂದ್ರ ಸ್ಥಾನವಾಗಿದೆ.

### ಗುರಿ ಮತ್ತು ದೂರದೃಷ್ಠಿ :

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು 2017 ರಲ್ಲಿ ಬೋಧನೆ, ತರಬೇತಿ ಮತ್ತು ಅಧ್ಯಯನದ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿ, ಸ್ಥಳೀಯ ಸ್ವಯಂ ಸಂಸ್ಥೆಗಳ ಬಲಪಡಿಸುವಿಕೆ ಮತ್ತು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳ ಅಭ್ಯಾಸದ ಮೂಲಕ ಸಮಗ್ರ ಅಭಿವೃದ್ಧಿಯ ಉದ್ದೇಶದಿಂದ ಸ್ಥಾಪಿಸಲಾಯಿತು. ವಿಶ್ವವಿದ್ಯಾಲಯದ ದೃಷ್ಟಿ ಮತ್ತು ಗುರಿ, ಸುಸ್ಥಿರ ಗ್ರಾಮೀಣಾಭಿವೃದ್ಧಿ, ಗ್ರಾಮೀಣ ಜನತೆಯ ಜೀವನ ಗುಣಮಟ್ಟವನ್ನು ಸುಧಾರಣೆ ಪಡಿಸುವ, ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮರ್ಪಕವಾಗಿ ಭಾಗಿಯಾಗುವ ಮನೋಭಾವದ ಮಾನವ ಸಂಪನ್ಮೂಲದ ಸೃಜನೆಯಾಗಿದೆ. ಗ್ರಾಮೀಣ ಸಮಾಜದಲ್ಲಿ ಬಡತನವನ್ನು ಕಡಿಮೆ ಮಾಡಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಜನರು ತಮ್ಮದೇ ಆದ ಕ್ಷೇಮಾಭಿವೃದ್ಧಿ, ಆರ್ಥಿಕ ಮತ್ತು ಸಮಾಜೋ–ರಾಜಕೀಯ ಪ್ರಗತಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಬೆಳವಣಿಗೆಗೆ ಕಾರಣವಾಗುವ ಆರೋಗ್ಯ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗಳಲ್ಲಿ ಅಗತ್ಯ ಸೇವೆಗಳನ್ನು ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ವಿವಿಧ ಪಾಲುದಾರರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದೂ ಇದರ ಗುರಿಯಾಗಿದೆ.

### ದೇಸಿ ಸಾವಯವ ಕೃಷಿಯ ಕಾರ್ಯಾಗಾರದ ಕುರಿತು :

ಮಹಾತ್ಮಾ ಗಾಂಧೀಜಿಯವರ ಚಿಂತನೆಗಳಾದ ಗ್ರಾಮಗಳ ಉದ್ಧಾರವನ್ನು ಅವರ ಕುಲ ಕಸಬುಗಳಾದ ವ್ಯವಸಾಯ ಬಡಿಗತನ, ಕಂಬಾರಿಕೆ, ನೇಕಾರಿಕೆ, ಟೇಲರಿಂಗ ಕಸೂತಿ ಕೆಲಸ ಇನ್ನೂ ಮುಂತಾದ ಕೆಲಸ ಕಾರ್ಯಗಳನ್ನು ಸ್ವತಃ ತಾವೇ ನಿರ್ವಹಿಸಿಕೊಂಡು ಹೋಗುವಂತೆ ಮಾಡಿ ಜನರ ಆರ್ಥಿಕತೆಯನ್ನು ಸರಿದಾರಿಗೆ ತಂದು ದೇಶದ ಬೆಳವಣಿಗೆಯಲ್ಲಿ ಸಹಕಾರಿಯಾಗುವಂತೆ ಮಾರ್ಗದರ್ಶನ ಮಾಡುವ ಗುರಿಗಳನ್ನು ನಮ್ಮ ವಿಶ್ವವಿದ್ಯಾಲಯದ ಮೂಲಕ ಹಮ್ಮಿಕೊಳ್ಳಲಾಗುವುದು. ಜೊತೆಗೆ ಭಾರತ ದೇಶದ ಮೂಲ ಉದ್ಯೋಗ ಕೃಷಿಯಲ್ಲಿ ಸಾವಯವ ಅಂಶಗಳನ್ನೊಳಗೊಂಡ ವ್ಯವಸಾಯವನ್ನು ಪ್ರೋತ್ಸಾಹಿಸುವುದು ಈ ಗೋ ಆಧಾರಿತ ಸಾವಯವ

ಕೃಷಿಯ "ಪ್ರಾತಕ್ಷಿಕೆ ಮತ್ತು ಸಂವಾದ" ಕಾರ್ಯಕ್ರಮದ ಮೂಲ ಆಶಯ.

ರಾಷ್ಟ್ರಪಿತ ಮಹಾತ್ಮಾ ಗಾಂಧಿಜೀಯವರ ಕನಸಾದ ಗ್ರಾಮ್ ಸ್ವರಾಜ್‌ನ ಪರಿಕಲ್ಪನೆಗೆ ಪೂರಕವಾಗಿ ಹಾಗೂ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರ ದೂರದೃಷ್ಟಿ, ಮಾರ್ಗದರ್ಶನ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು ಈಗಾಗಲೇ ವಿಶ್ವವಿದ್ಯಾಲಯದಿಂದ ಕಾರ್ಯಾರಂಭಿಸಲಾಗಿದೆ. ಭಾರತ ದೇಶದ ಭವಿಷ್ಯದ ದೃಷ್ಟಿಯಿಂದ ಹಾಗೂ ಅದಕ್ಕೆ ಪೂರಕವಾದ ಸಾವಯವ ಕೃಷಿಯ ಮಹತ್ವದ ಪರಿಕಲ್ಪನೆಯಿಂದ ಈ ಯೋಜನೆಯನ್ನು ರೂಪಿಸಿ ಕಾರ್ಯರೂಪಕ್ಕೆ ತರಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಸುತ್ತಮುತ್ತಲಿನ ರೈತರು, ಪ್ರಗತಿಪರ ರೈತರನ್ನು ಕೂಡಿಸಿಕೊಂಡು ಸಾವಯವ ಕೃಷಿಯ ಮಹತ್ವವನ್ನು ಅವರಿಗೆ ತಿಳಿಸುವ ಉದ್ದೇಶದಿಂದ ಈ ಒಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

**ನೀಲ ನಕ್ಷೆ :**

ದಿನಾಂಕ 12.07.2021 ರಂದು ವಿಶ್ವವಿದ್ಯಾಲಯಕ್ಕೆ ಒದಗಿಸಲ್ಪಟ್ಟ ನಾಗಾವಿ ಸಮೀಪದ 5.12 ಎಕರೆ ಜಮೀನಿನಲ್ಲಿ "ದೇಸೀ ಯೋಜನೆ" (DeSSi Project) (ಡೆಮಾನ್ಸ್ಟ್ರೇಬಲ್, ಸ್ಕೇಲೇಬಲ್, ಮತ್ತು ಸಸ್ಟೇನೇಬಲ್ ಇನಿಶಿಯೇಟಿವ್ಸ್) ಎಂಬ ಹೆಸರಿನಡಿಯಲ್ಲಿ ವ್ಯವಸಾಯಕ್ಕೆ ಸಂಬಂದಿಸಿದ ಅದರಲ್ಲೂ ಪ್ರಮುಖವಾಗಿ ದೇಸಿ ಗೋ ಆಧಾರಿತ ಸಾವಯವ ಕಾರ್ಯ ಚಟುವಟಿಕೆಗಳ ಕುರಿತು ಒಂದು ದಿನದ ಗೋ ಆಧಾರಿತ ಸಾವಯವ ಕೃಷಿಯ "ಪ್ರಾತಕ್ಷಿಕೆ ಮತ್ತು ಸಂವಾದ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಕಾರ್ಯ ನಿರ್ವಾಹಕ ಪರಿಷತ್ತಿನ ಸದಸ್ಯರು ಹಾಗೂ SKDRDP ಯ ನಿವೃತ್ತ ನಿರ್ದೇಶಕರಾದ ಡಾ. ಪ್ರಕಾಶ ಭಟ್ಟರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು, ಜೊತೆಗೆ ಸಾವಯವ ಕೃಷಿಯ ಪ್ರಯೋಜನ ಪಡೆದುಕೊಳ್ಳುವ ಉದ್ದೇಶದಿಂದ ಗದುಗಿನ ಸುತ್ತಮುತ್ತಲಿನ ರೈತರು ಮತ್ತು ರಾಜ್ಯದ ಬೇರೆ ಬೇರೆ ಸ್ಥಳಗಳಿಂದ ಸಾವಯುವ ಕೃಷಿಯುಲ್ಲಿ ತಮ್ಮನ್ನು ತೊಡಗಿಸಿಕೊಂಡತಹ ಹಾಗೂ ಸಾವಯುವ ಕೃಷಿಯ ಮಹತ್ವವನ್ನು ಪಡೆದುಕೊಳ್ಳಲು ಅದರಲ್ಲಿ ಭಾಗವಹಿಸಲು ಮತ್ತು ಹತ್ತು ಹಲವಾರು ಪ್ರಗತಿಪರ ರೈತರು (ಅಂದಾಜು 150) ಆಗಮಿಸಿದ್ದರು. ಪ್ರಥಮವಾಗಿ ಬೆಳಗ್ಗೆ 10.30 ಗಂಟೆಗೆ ಪ್ರಾರಂಭಿಸಲಾದ ಕಾರ್ಯಕ್ರಮದ ಮೊದಲು ಸಾವಯವ ಕೃಷಿಗೆ ಸಂಬಂಧಿಸಿದ Organic Fertilizer ಗಳ ತಯಾರಿಕೆ, ಪ್ರಾತ್ಯಕ್ಷಿಕೆ, ಮತ್ತು ಉಪಯೋಗಗಳ ಕುರಿತು ಕಾರ್ಯಕ್ರಮಕ್ಕೆ ಆಗಮಿಸಿದ ಸುತ್ತಮುತ್ತಲಿನ ರೈತರಿಗೆ ಪ್ರಾತ್ಯಕ್ಷಿಕೆಯನ್ನು ಮಾಡಲಾಯಿತು.

ಸಾವಯವ ಕೃಷಿಗೆ ಪೂರಕವಾದ

1. ಜೀವಾಮೃತ,
2. ನ್ಯೂಟ್ರಿಯಂಟ್ ಸಲ್ಯೂಷನ್,
3. ದಶಗವ್ಯ,
4. ಪಂಚಾಮೃತ,
5. ಗೋ ಕೃಪಾಮೃತ
6. ಪಂಚಗವ್ಯ
7. ಕುನಪಜಲ

ಇನ್ನೂ ಮುಂತಾದವುಗಳನ್ನು ತಯಾರಿಸುವ ವಿಧಾನ, ಅವುಗಳನ್ನು ನಾವೂ ಬೆಳೆಯುವ ಬೆಳೆಗಳಿಗೆ ಯಾವ ಸಮಯದಲ್ಲಿ ಯಾವ ದ್ರಾವಣವನ್ನು ಸಿಂಪಡಿಸಬೇಕು, ಅದರಿಂದಾಗುವ ಪ್ರಯೋಜನ ಜೊತೆಗೆ ಭೂಮಿ ಹದಗೊಳಿಸುವುದು, ಬಿತ್ತನೆ ಕಾರ್ಯ ಕೈಗೊಳ್ಳುವುದು, ಸಕಾಲಕ್ಕೆ ಬೀಜೋಪಚಾರ ಮಾಡುವುದು, ನೀರಿನ ವ್ಯವಸ್ಥೆ, ಸಾವಯವ ಕಾರ್ಯ ಚಟುವಟಿಕೆಗಳನ್ನು ನಿರಂತರವಾಗಿ ಪರಿಣಾಮಕಾರಿ ಯಾಗಿ ಕೃಷಿಯಲ್ಲಿ ಮಾಡುವುದರಿಂದ ಭೂಮಿಯಲ್ಲಿ ಎರೆ ಹುಳುಗಳ ಹೆಚ್ಚಳ ಮತ್ತು ಯಾವುದೇ ಸರ್ಕಾರಿ ಗೊಬ್ಬರದ ಬದಲಾಗಿ ಸಾವಯುವ ದ್ರಾವಣಗಳನ್ನು ಬಳಸಿ ವ್ಯವಸಾಯವನ್ನು ಮಾಡುವ ವಿಧಾನಗಳನ್ನು ಎಲ್ಲರಿಗೂ ಪ್ರಾತ್ಯಕ್ಷಿಕೆ ಮಾಡಿ ತೋರಿಸಲಾಯಿತು.

ನಂತರ ರೈತರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಡಾ. ಪ್ರಕಾಶ್ ಭಟ್‌ರವರು ನಮ್ಮ ದೇಶದ ಮತ್ತು ನಮ್ಮ ಹಳ್ಳಿಗಳ ಮೂಲ ಕಸಬು ವ್ಯವಸಾಯವಾಗಿದ್ದು, ಈ ವ್ಯವಸಾಯವನ್ನು ಸರಿಯಾದ ಕ್ರಮದಲ್ಲಿ ಅಂದರೆ ದೇಸಿ ಸಾವಯವ ಕೃಷಿ ಪದ್ಧತಿಯನ್ನು ನಿರ್ವಹಿಸುವುದರ ಮೂಲಕ ರೈತರನ್ನು ಸದೃಢವನ್ನಾಗಿ ಮಾಡುವುದು ಈ ದೇಸಿ ಪ್ರಾಜೆಕ್ಟ್‌ನ ಮೂಲ ಉದ್ದೇಶವಾಗಿದೆ. ಅಂದರೆ ಇವತ್ತು ಎಷ್ಟೋ ಜನ ರೈತರಲ್ಲಿ ಹೆಚ್ಚಿನ ಭೂಮಿ ಇದೆ ಆದರೆ ಅವರಿಗೆ ಸರಿಯಾದ ಮಾರ್ಗದರ್ಶನವಿಲ್ಲದ ಕಾರಣ ತಮಗೆ ತೋಚಿದ ಬೆಳೆಗಳನ್ನು ಸರ್ಕಾರಿ ಗೊಬ್ಬರಗಳನ್ನು ಉಪಯೋಗಿಸಿಕೊಂಡು ಬೆಳೆದು ಸರಿಯಾದ ಬೆಲೆ ಸಿಗದೆ ಆರ್ಥಿಕವಾಗಿ ದುರ್ಬಲರಾಗುತ್ತಿದ್ದಾರೆ. ಕಾರಣ ಕಡಿಮೆ ಜಮೀನಿನಲ್ಲಿ ಮಿಶ್ರ ಬೆಳೆಗಳನ್ನು ಬೆಳೆಯುವ ಮೂಲಕ ಮತ್ತು ಹೆಚ್ಚಿನ ಬೆಲೆಗೆ ದೊರೆಯುವ ಯಾವುದೇ ರೀತಿಯ ಪ್ರಕೃತಿಗೆ ಹಾನಿಕಾರಕವಾದ ಕ್ರಿಮಿನಾಶಕಗಳನ್ನು ಬಳಸದೆ ಸ್ವದೇಶೀಯವಾಗಿ ಕಡಿಮೆ ಖರ್ಚಿನಲ್ಲಿ (ರೈತರು ತಾವೇ



ಸ್ವತಃ ತಯಾರಿಸಿಕೊಳ್ಳಲು ಅನುಕೂಲವಾಗುವ) ದೊರೆಯುವಂತಹ ಸಾವಯವ ಉತ್ಪನ್ನಗಳನ್ನು ಬಳಸಿಕೊಂಡು ಕಡಿಮೆ ಬಂಡವಾಳದಲ್ಲಿ ಹೆಚ್ಚು ಆದಾಯಕೊಡುವ ಫಸಲುಗಳನ್ನು ಬೆಳೆಯುವ ಮುಖಾಂತರ ಹೆಚ್ಚಿನ ಆದಾಯವನ್ನು ಹೇಗೆ ಗಳಿಸಬಹುದು ಎಂಬ ಪ್ರಾತ್ಯಕ್ಷಿಕೆಯನ್ನು ಮುಂದಿನ ದಿನಗಳಲ್ಲಿ ಎಲ್ಲ ರೈತ ಬಾಂಧವರಿಗೆ ತಿಳಿಸಿಕೊಡುವ ಉದ್ದೇಶವನ್ನು ಹೊಂದಲಾಗಿದೆ ಎಂದು ತಿಳಿಸಿದರು.

ನಂತರ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಇಂದು ರೈತರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ ಲಕ್ಷಗಟ್ಟಲೆ ಬಂಡವಾಳವನ್ನು ಹಾಕಿ ಸರಿಯಾದ ಬೆಲೆ ಸಿಗದಿದ್ದಾಗ ಎಷ್ಟೋ ಜನ ರೈತರು ಕಂಗಾಲಾಗಿ ಆತ್ಮಹತ್ಯೆಯ ದಾರಿಗಳನ್ನು ಹಿಡಿಯುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ. ಕಾರಣ ರೈತರು ಯಾವ ಸಮಯದಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕು ಮತ್ತು ಅವರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಗೆ ಮಾರಾಟವಾಗುವಂತೆ ಸಲಹೆ ಸೂಚನೆಗಳನ್ನು ಈ ದೇಸಿ ಪ್ರಾಜೆಕ್ಟನ ಮೂಲಕ ಮತ್ತು ವಿಶ್ವವಿದ್ಯಾಲಯದ ಮೂಲಕ ಮಾಡಲಾಗುವುದು.



ಪ್ರಸ್ತುತ ಸ್ಥಿತಿಯಲ್ಲಿ ಹಳ್ಳಿಗಳ ಜನರು ಉದ್ಯೋಗಗಳನ್ನು ಅರಸಿಕೊಂಡು ಗುಳೆ ಹೊರಟಿದ್ದು, ಅವರುಗಳಿಗೆ ವ್ಯವಸಾಯ, ಹೈನುಗಾರಿಕೆ, ಕುರಿ ಸಾಕಾಣಿಕೆ, ಜೇನು ಸಾಕಾಣಿಕೆ, ಕೋಳಿ ಸಾಕಾಣಿಕೆ ಮತ್ತು ಪ್ರಮುಖವಾಗಿ ಕಡಿಮೆ ಜಮೀನಿದ್ದರೂ ಮಿಶ್ರ ಬೆಳೆಗಳನ್ನು ಅಂದರೆ ಒಂದು ಬೆಳೆ ಕೈಕೊಟ್ಟರೂ ಇನ್ನೊಂದು ಬೆಳೆ ಕೈಹಿಡಿಯುವ ಹಾಗೆ ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಎಲ್ಲಾ ಕಾಲದಲ್ಲಿಯೂ ರೈತರು ಆರ್ಥಿಕವಾಗಿ ಸಧೃಡವಾಗಿ ಜೀವನವನ್ನು ನಡೆಸಿಕೊಂಡು ಹೋಗುವಂತಹ ವ್ಯವಸ್ಥೆಯನ್ನು ನಿರ್ಮಿಸುವುದರ ಮೂಲಕ ಹಳ್ಳಿಗಳಿಂದ ಪಟ್ಟಣಗಳಿಗೆ ಉದ್ಯೋಗ ಅರಸಿ ವಲಸೆ ಹೋಗುವುದನ್ನು ತಪ್ಪಿಸುವುದು ಈ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದುದ್ದಕ್ಕೂ ಮಳೆರಾಯನ ಸಿಂಚನ ಮುಂದುವರೆದಿದ್ದರೂ, ಮಳೆಯನ್ನು ಲೆಕ್ಕಿಸದೆ ಸಂವಾದ ಕಾರ್ಯಕ್ರಮದಲ್ಲಿ ಅಂದಾಜು 300 ಜನ ರೈತರು ಭಾಗವಹಿಸಿದ್ದರು ಮತ್ತು ಸಾವಯವ ಕೃಷಿಯ ಕುರಿತು ಆಸಕ್ತಿಯಿಂದ ಹಲವಾರು ಪ್ರಶ್ನೆಗಳನ್ನು ಆಗಮಿಸಿದ ಮುಖ್ಯ ಅತಿಥಿಗಳನ್ನು ಕೇಳಿ ಪರಿಹಾರವನ್ನು ಪಡೆದುಕೊಂಡರು.

ಅದಲ್ಲದೆ ಸಂವಾದ ಕಾರ್ಯಕ್ರಮದಲ್ಲಿ ದೇಸಿ ಯೋಜನೆಯ ಹಾಗೂ ಸಂವಾದ ಕಾರ್ಯಕ್ರಮದ ಕುರಿತು ದೇಶಿ ಯೋಜನೆಯ ಸಂಯೋಜಕರಾದ ಡಾ. ರಂಗಪ್ಪ ಯರಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ ದೇಸಿ ಯೋಜನೆಯ ಒಂದು ವರ್ಷ ನಡೆದು ಬಂದ ದಾರಿ, ಅದರ ಉದ್ದೇಶ, ಮತ್ತು ಮುಂದಿನ ದಿನಗಳಲ್ಲಿ ದೇಸಿ ಯೋಜನೆಯಿಂದ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರು, ಇನ್ನಿತರೆ ಅಧಿಕಾರಿ ವರ್ಗದವರು, ರೈತರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು. ಶ್ರೀ ಆನಂದಗೌಡ ಪಿ ಎಫ್ ಅವರು ಸ್ವಾಗತಿಸಿದರು, ಶ್ರೀ ನಿರಂಜನ ಪೂಜಾರ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸಾಧಕರ ಸಂದರ್ಶನ

# ಕೃಷಿ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಶ್ರೀಮತಿ ಸುನಂದಾ ಗದ್ದಿಕೇರಿ ಇವರೊಂದಿಗೆ ಸಂದರ್ಶನ





**ಶ್ರೀಮತಿ ಸುನಂದಾ ಗದ್ದಿಕೇರಿ**
ಅಳವಂಡಿ ಗ್ರಾಮ
ಕೊಪ್ಪಳ ಜಿಲ್ಲೆ



**ಸಂದರ್ಶಕರು,**
**ಶಶಿಕಲಾ ಬಿ. ಹಳ್ಳಿಕೇರಿ**
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ

**ಪರಿಚಯ :** ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಸಾಧನೆಯನ್ನು ಮಾಡಿ, ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಮಹಿಳೆಯರಿಗೆ ಸ್ಫೂರ್ತಿಯಾಗಿರುವ ಶ್ರೀಮತಿ ಸುನಂದಾ ಗದ್ದಿಕೇರಿಯವರು, ಮೂಲತಃ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕು, ಗದ್ದಕೇರಿ ಗ್ರಾಮದ ತಿಪ್ಪಾರಡ್ಡಿ ಮನೆತನದ ಶ್ರೀ ಕೊಟ್ರಣ್ಣ ಮತ್ತು ನಿಂಗಮ್ಮ ತಿಪ್ಪಾರೆಡ್ಡಿ ದಂಪತಿಯ ಮಗಳಾಗಿ ದಿನಾಂಕ 25 ಜುಲೈ, 1971 ರಂದು ಜನಿಸಿದರು. 1990 ರಲ್ಲಿ ತಮ್ಮ B.Com. ಪದವಿಯನ್ನು ಪೂರ್ಣಗೊಳಿಸಿ, ನಂತರ ಇವರು ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತ ಫಕೀರಡ್ಡೆಪ್ಪ ಗದ್ದಿಕೇರಿಯವರ ಸೊಸೆಯಾಗಿ ಶ್ರೀ ವಿಶ್ವನಾಥ ಗದ್ದಿಕೇರಿಯವರ ಪತ್ನಿಯಾಗಿ 1993 ರಲ್ಲಿ ತಮ್ಮ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಗಂಡನ ಮನೆಯಲ್ಲಿ ಗೃಹಿಣಿಯಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಪ್ರಸ್ತುತ ಕೃಷಿ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಶ್ರೀಮತಿ ಸುನಂದಾ ಗದ್ದಿಕೇರಿಯವರು ಕೃಷಿ ಚಟುವಟಿಕೆಯಲ್ಲಿ ತೊಡಗಿ ಅನೇಕ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ವಿಶ್ವವಿದ್ಯಾಲಯದ ವತಿಯಿಂದ ಇವರ ಸಂದರ್ಶನ ಮಾಡಿ ಅದರ ಆಯ್ದ ಭಾಗವನ್ನು ಪ್ರಕಟಿಸಲಾಗಿದೆ.

ವಿ.ವಿ. : ಕೃಷಿಯನ್ನು ಪ್ರಾರಂಭಿಸಲು ಕಾರಣವೇನು?

ಸು.ಗ. : ನನ್ನ ಪತಿಯವರು ವ್ಯಾಪಾರಸ್ಥರಾಗಿರುವುದರಿಂದ ವ್ಯವಹಾರದಲ್ಲಿ ನಷ್ಟ ಉಂಟಾಯಿತು. ಮುಂದೆ ಏನು ಮಾಡಬೇಕೆಂದು ಆಲೋಚನೆ ಮಾಡುವಾಗ ನನಗೆ ಹೊಳೆದದ್ದು ತಂದೆಯವರು ಮಾಡುತ್ತಿದ್ದ ಕೃಷಿ. ಅಂತಹ ಸಂದರ್ಭದಲ್ಲಿ ಸಾಕಷ್ಟು ಅಡೆತಡೆಗಳಿದ್ದರೂ ತಂದೆಯವರ ಪ್ರೇರಣೆ ಸ್ಫೂರ್ತಿಯಿಂದ ಕೃಷಿಯೇ ಗೊತ್ತಿಲ್ಲದ ನಾನು ಜೀವನಾಂಶಕ್ಕಾಗಿ ನನ್ನನ್ನು ಕೃಷಿಯಲ್ಲಿ ತೊಡಗಿಸಿಕೊಂಡೆನು.

ವಿ.ವಿ.: ಮೊದಲು ಯಾವ ರೀತಿ ಕೃಷಿಯನ್ನು ಪ್ರಾರಂಭಿಸಿದಿರಿ?

ಸು.ಗ.: ನಮ್ಮ ಜಮೀನಿನಲ್ಲಿ 2000 ರಲ್ಲಿ ನಮ್ಮ ತಂದೆಯವರ ಸಹಕಾರದಿಂದ ಪ್ಲಾಂಟೇಷನ್ ಮಾಡಬೇಕೆಂದು ಕೃಷಿಯನ್ನು ಪ್ರಾರಂಭಿಸಿದೆನು. ಕೆಲವೊಂದು ಗಿಡಗಳಾದ ಅಂಜೂರ, ಪೇರಲ, ತಾಳೆಮರ, ಚಿಕ್ಕು ಮೊದಲಾದವುಗಳನ್ನು ಮೊದಲು ಹಚ್ಚಿದವು. ಅದರಿಂದ ಆದಾಯವೂ ಚೆನ್ನಾಗಿ ಬಂದಿತು.

ವಿ.ವಿ.: ಈ ಮೇಲಿನ ಬೆಳೆಗಳಲ್ಲದೇ ಮತ್ತೆ ಯಾವ ಬೆಳೆಯನ್ನು ಪ್ರಾರಂಭಿಸಿದ್ದೀರಿ?

ಸು.ಗ.: ನೀರು ಸವಳು ಇರುವುದರಿಂದ ಬೇರೆ ಯಾವದೇ ಬೆಳೆ ಬರದ ಕಾರಣ, ಪ್ರಾರಂಭದಲ್ಲಿ 2004 ರಲ್ಲಿ 3 ಎಕರೆ ಜಮೀನಿನಲ್ಲಿ ದಾಳಿಂಬೆ ಗಿಡಗಳನ್ನು ಹಚ್ಚಿದೆನು.

ವಿ.ವಿ.: ಈ ಎಲ್ಲಾ ಗಿಡಗಳನ್ನು ಬೆಳೆಸಲು ಯಾವ ರೀತಿ ನಿರ್ವಹಣೆಯನ್ನು ಮಾಡುತ್ತಿದ್ದೀರಿ ?

ಸು.ಗ.: ಗಿಡಗಳ ಪಾಲನೆ ಪೋಷಣೆಯನ್ನು ಸ್ವತಃ ನಾನೇ ನಿಂತು ಮಾಡುತ್ತಿದ್ದೆನು. ಮತ್ತು ಗಿಡಗಳಿಗೆ ಔಷಧಿಯನ್ನು ಸಿಂಪಡಿಸಲು ನಾನೇ ಅಳತೆಯನ್ನು ಮಾಡಿ ಕೊಡುತ್ತಿದ್ದೆನು. ನಂತರದಲ್ಲಿ ಮತ್ತೆ ಒಂದುವರೆ ಎಕರೆ ದಾಳಿಂಬೆ ಸಸಿಗಳನ್ನು ಹಚ್ಚಿದೆವು. 2007ರಲ್ಲಿ ಒಟ್ಟು 4.5 ಎಕರೆಯಲ್ಲಿ ರೂ.10 ಲಕ್ಷ ಆದಾಯ ಬಂದಿತು.

ವಿ.ವಿ.: ನೀವು 4.5 ಎಕರೆಯಲ್ಲಿ ದಾಳಿಂಬೆ ಬೆಳೆಯಲು ಪ್ರಾರಂಭಿಸಿದಿರಿ, ಇಳವರಿನೂ ಚೆನ್ನಾಗಿ ಬಂದಿತು ಆದರೆ ಇನ್ನೂ ಹೆಚ್ಚಿನ ಬಂಡವಾಳ ಹಾಕಿ ಇನ್ನೂ ಹೆಚ್ಚು ಗಿಡಗಳನ್ನು ಹಾಕಲಿಲ್ಲವೇ ?

ಸು.ಗ.: ಹೌದು ಹೆಚ್ಚಿನ ಬಂಡವಾಳ ಹಾಕಿ ಮತ್ತೆ 40 ಎಕರೆ ಜಮೀನಿನಲ್ಲಿ ದಾಳಿಂಬೆ ಗಿಡಗಳನ್ನು ಹಾಕಿದೆವು.

ವಿ.ವಿ.: ಹೊಲದಲ್ಲಿ ಬಂದಂತಹ ಹಣ್ಣುಗಳನ್ನು ಯಾವ ರೀತಿ ರಫ್ತು ಮಾಡುತ್ತಿದ್ದೀರಿ ?

ಸು.ಗ.: ರಫ್ತು ಮಾಡಲು ಯಾವ ತೊಂದರೆಯಾಗದೆ ಕಷ್ಟ ಪಟ್ಟು ಪತಿಯ ಸಹಕಾರದಿಂದ ಏಜೆಂಟರೊಂದಿಗೆ ಮಾತನಾಡಿ, ಹಣ್ಣುಗಳ ಪ್ಯಾಕಿಂಗ್ ಮಾಡುವಾಗ ನಾವೇ ನಿಂತು ಹಣ್ಣುಗಳನ್ನು ಬೇರೆ ಬೇರೆ ಮಾಡಿ ಬಾಕ್ಸ್‌ಗಳನ್ನು ತಯಾರಿಸಿ ಬೆಂಗಳೂರು, ಹೊಸೂರು ಮಾರ್ಕೆಟ್‌ಗೆ ಕಳುಹಿಸುತ್ತೇವೆ. ಮತ್ತು ಬೆಲೆ ಹೆಚ್ಚಾದಾಗ ತೋಟಕ್ಕೆ ಬಂದು ಸ್ಥಳೀಯ ವ್ಯಾಪರಸ್ಥರೇ ದಿನಕ್ಕೆ 10 ಟನ್ ನಂತೆ ತೆಗೆದುಕೊಂಡು ಹೋಗುತ್ತಾರೆ.

ವಿ.ವಿ.: ನೀವು ಕೃಷಿಯನ್ನು ಮಾಡಲು ನಿಮ್ಮ ಪತಿಯ ಸಹಕಾರ ಒಪ್ಪಿಗೆ ಇತ್ತೆ?

ಸು.ಗ.: ಕೃಷಿಯನ್ನು ಮಾಡಲು ನಮ್ಮ ಪತಿಯ ಸಹಕಾರ ಒಪ್ಪಿಗೆ ಸಂಪೂರ್ಣವಾಗಿತ್ತು. ಅವರೂ ಕೂಡ ಕೃಷಿಯಲ್ಲಿ ಭಾಗಿಯಾಗಿದ್ದರು.

ವಿ.ವಿ.: ಈ ಕೃಷಿ ಕೆಲಸ ನಿಮಗೆ ತೃಪ್ತಿ ತಂದುಕೊಟ್ಟಿದೆಯಾ?

ಸು.ಗ.: ಹೌದು, ಈ ಕೃಷಿ ಕೆಲಸ ನನಗೆ ತೃಪ್ತಿ ತಂದುಕೊಟ್ಟಿದೆ.

ವಿ.ವಿ: ಈ ಕೃಷಿ ಕೆಲಸದಿಂದ ನಿಮಗೆ ಯಾವಗಲಾದರೂ ಬೇಜಾರು ಆಗಿದೆಯೇ?

ಸು.ಗ.: ಇಲ್ಲ ಯಾಕೆಂದರೆ ಆ ಒಂದು ಕೆಲಸದಲ್ಲಿ ತುಂಬಾ ಆಸಕ್ತಿ ಇತ್ತು, ನಂತರ ಒಂದೊಂದು ವರ್ಷ ಬೆಲೆನೂ ಕಡಿಮೆಯಾಗಿ ಆದಾಯ ಕಡಿಮೆಯಾಗಿ 10 ಎಕರೆ ದಾಳಿಂಬೆ ಹಾನಿಯಾಯಿತು. ಹಾನಿಯಾದರು ಕೂಡ ಎದೆಗುಂದದೆ ಕುಗ್ಗದೇ ನಿರಂತರವಾಗಿ ದಾಳಿಂಬೆ ಗಿಡಗಳ ನಿರ್ವಹಣೆ ಮಾಡಿದೆನು. ಔಷಧಿಯನ್ನು ಕೂಡ ಮೊದಲು ಪಂಪ್ ಮೂಲಕ ಸಿಂಪಡಿಸಿತ್ತಿದ್ದೆವು. ನಂತರ ತಂತ್ರಜ್ಞಾನ ಮುಂದುವರೆದಂತೆ, ಗಿಡಗಳಿಗೆ ಔಷಧಿಯನ್ನು ಬ್ಲೋವರ್ ಮೂಲಕ ಸಿಂಪಡಿಸುತ್ತಿದ್ದು, ದಾಳಿಂಬೆ ಹಣ್ಣುಗಳ ಇಳವರಿ ತುಂಬಾ ಚೆನ್ನಾಗಿ ಬಂದಿತು. ಆದುದರಿಂದ ನನಗೆ ಈ ಕೃಷಿ ಕೆಲಸದಿಂದ ಯಾವತ್ತು ಬೇಜಾರಾಗಿಲ್ಲ.

ವಿ.ವಿ.: ತಾವು ಮಾಡಿದ ಈ ಕೃಷಿಯಿಂದ ನಿಮಗೆ ಪ್ರಶಸ್ತಿಗಳು ಮತ್ತು ಸನ್ಮಾನಗಳೇನಾದರೂ ಬಂದಿವೆಯಾ?

ಸು.ಗ.: ಹೌದು ಕೃಷಿ ವಿಶ್ವವಿದ್ಯಾಲಯ ರಾಯಚೂರು ಇವರಿಂದ 2017 ರಲ್ಲಿ 'ಶ್ರೇಷ್ಠ ಕೃಷಿ ಮಹಿಳೆ' ಪ್ರಶಸ್ತಿ, ಮತ್ತು 2021 ರಲ್ಲಿ ನಡೆದ ಕೊಪ್ಪಳ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ ಇವರಿಂದ 'ಕೃಷಿ ಸಾಧಕ' ಪ್ರಶಸ್ತಿಯನ್ನು ಮತ್ತು 2017 ರಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳದಲ್ಲಿ ಸನ್ಮಾನ ಕೂಡ ಮಾಡಿದ್ದಾರೆ.

ವಿ.ವಿ.: ಕೃಷಿಯ ಜೊತೆಗೆ ಬೇರೆ ಏನಾದರೂ ಕಾರ್ಯವನ್ನು ನಿರ್ವಹಿಸುತ್ತಿದ್ದೀರಾ ?

ಸು.ಗ.: ದಾಳಿಂಬೆ ಮತ್ತು ಬಾಳೆ ಹಣ್ಣನ್ನು ಯುರೋಪ್ ದೇಶಕ್ಕೆ ರಫ್ತು ಮಾಡಲು 'ಕಾಯಕ್ ಫಾರ್ಮ್' ಅಳವಂಡಿ ಎಂಬ ತರಬೇತಿ ಸಂಸ್ಥೆಯನ್ನು ಕೂಡ ಪ್ರಾರಂಭಿಸಿ ಆ ಕಾರ್ಯವನ್ನೂ ಕೂಡ ನಿರ್ವಹಿಸುತ್ತಿದ್ದೇನೆ.

ವಿ.ವಿ. : ವರ್ಷಕ್ಕೆ ತಮ್ಮ ಆದಾಯ ಎಷ್ಟು?

ಸು.ಗ. : ವರ್ಷಕ್ಕೆ ಸುಮಾರು ಎಕರೆಗೆ ರೂ. 2–2.5 ಲಕ್ಷದಂತೆ ಒಟ್ಟು ರೂ. 1.5 ಕೋಟಿ ಲಕ್ಷ ಆದಾಯ ಬಂದಿದೆ.

ಹೀಗೆ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೀಮತಿ ಸುನಂದಾ ಗದ್ದಿಕೇರಿಯವರ ಸಂದರ್ಶನವನ್ನು ಮಾಡಿದ್ದು ನಮಗೆ ತುಂಬಾ ಹೆಮ್ಮೆಯೆನಿಸುತ್ತಿದೆ.

Special Article



**Dr.Shashikant D.H.**
Placement Officer,
K.S.R.D.P.R.U.,
Gadag

# Orientation on YUVA Entrepreneurship Program

## (Expose to Entrepreneurship)

The Karnataka State Rural Development and Panchayt Raj University, Gadag and Deshpande Startups, Hubli have entered into a Memorandum of Understanding (MoU) to undertake several joint activities focusing on Rural Development on 19th July 2021. Deshpande Startups is a non-profit organization, which operates to create an effective ecosystem where resources are used through entrepreneurship, innovation, sustainability and support mission driven entrepreneurs with innovative business ideas.

The emerging spectrum of Startup is playing a pivotal role in shaping the economy and society of the Country. The world has 7 billion people, about the top 2 billion are now served well by what we now know as the startup ecosystem in metros in India and abroad. The economic activity for the bottom 5 billion is picking up and that growing economy is underserved by startups. India has about 50,000 Startups which has got the 3rd largest startup ecosystem in the world; expected to witness year on year growth of 12-15% annually.

As part of the MoU with Deshpande Startups, considering the need of the hour the Karnataka State Rural Development and Panchayat Raj University in association with Entrepreneurship Cell, Naipunya Kendra- Placement Cell and Centre for Research Innovation and Evaluation has conducted one-day Orientation on YUVA Entrepreneurship Programme for the Fourth Semester students of the University on 14th August 2021.

The Programme was presided by Hon'ble Vice Chancellor Prof.Vishnukant Chatapalli, Chief Guest Mr.Benjamin Mathew and Registrar Prof.Basavaraj L. Lakkannavar were present along with all the Coordinators and Faculty Members of Ten programme's. 100 Students of Ten Programmes got oriented towards the concept of Entrepreneurship. The first session of the Programme started by Student Registration followed by Inaugural session. Addressing the gathering Mr.Banjamin Mathew expressed about the need of the hour for the Startups, Entrepreneurship and the support they want to extend for the students of KSRDPR University. Vice Chancellor KSRDPRU who presided over the proceedings spoke on the vision and mission of the University and urged upon the Students of the University should become Job Providers and not Job Seekers and promised to support the required needs. Registrar, Prof.Basavaraj Lakkannavar welcomed the gathering and Ms.Alfidha performed the task of Master of Ceremony.







Hon'ble Vice Chancellor Prof.Vishnukant Chatapalli delivering the Presidential remarks (on right) and Mr.Benjamin Mathew, Chief Guest addressing the student gathering.

Mr.Amrut Patil and his team conducted the first Technical session, which was about orienting towards Startups and about the brainstorming, why one must choose the field of Entrepreneur followed by Mrs.Shravani Pawar, successful women Entrepreneur and founder of Safe Hands 24*7. To break the stereotype, Shravani Pawar, a 33-year-old entrepreneur and Founder of Safe Hands 24x7 is training women to become security guards. These women mostly hail from poor financial and weaker sections of the society, and the training provided by the startup empowers them, as well as provides financial support. Where in Shravani expressed about the hurdles, several difficulties faced in building the organization and said has trained around 600 women and has an annual turnover of Rs.Six crores. It provides services in Karnataka, Goa, Hyderabad, and Chennai.

Moving on to the post lunch session the Team engaged the students in the ice breaking session and conducted idea seeding activity dividing students into the groups. Where in the activities has given the real time experiences to the students and made to entering in to the field of Entrepreneurship. Out of the gathering 27 Students registered for YUVA Entrepreneurship Programme, who are willing to choose the field of Entrepreneur.

The program ended by presenting Vote of thanks, Dr.Abdul Aziz Asst.Directr, CTPS presided over the function .Mr .Girish Dixit, Asst.Director CRIE and Mr.Amrut Patil, Deputy Director, Deshpande Startups Were present on the dias. Laying the red carpet to the Engage and Elevate programmes Expose bids to beautiful end.



Semester Students of the University.

### ವಿಶೇಷ ಕಾರ್ಯಕ್ರಮ

# ಗ್ರಾಮೀಣ ಬದುಕಿನ ಅನುಭವ ಹಾಗೂ ಅಧ್ಯಯನ : ರೂರಲ್ ಇಮರ್ಶನ್ ಕಾರ್ಯಕ್ರಮ




**ಡಾ. ಅಭಯಕುಮಾರ ಗಸ್ತಿ**
ಸಂಯೋಜಕರು,
ಎಂ.ಕಾಂ. ಕಾರ್ಯಕ್ರಮ ಮತ್ತು
ಸಂಯೋಜಕರು,
ಆಂತರಿಕಗುಣಮಟ್ಟ ಭರವಸೆ ಕೋಶ,
ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ


ಗುಣಮಟ್ಟ ಶಿಕ್ಷಣದ ಅತ್ಯಂತ ನಿರ್ಣಾಯಕ ಅಂಶವೆಂದರೆ ಕೌಶಲ್ಯಗಳಿಗೆ ಒತ್ತು ನೀಡುವದು, ಕೌಶಲ್ಯಗಳು ಗ್ರಾಮೀಣ ಭಾಗದ ಸಮಸ್ಯೆಗಳನ್ನು ಗುರುತಿಸಲು ಹಾಗೂ ಪರಿಹರಿಸಲು ಮತ್ತು ಸರ್ಕಾರವು ಪರಿಚಯಿಸಿದ ಯೋಜನೆಗಳನ್ನು ವಿಶ್ಲೇಷಿಸಲು ಮತ್ತು ಅಧ್ಯಯನ ಮಾಡಲು ಸಹಾಯ ಮಾಡುತ್ತವೆ. ಇಂತಹ ಕೌಶಲ್ಯಗಳನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶವೇ ಈ ರೂರಲ್ ಇಮರ್ಶನ್ ಕಾರ್ಯಕ್ರಮ.

ಸುಸ್ಥಿರ ಗ್ರಾಮೀಣಾಭಿವೃದ್ದಿ ಹಾಗೂ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಸೃಜನಶೀಲ, ಸಮರ್ಪಣಾ ಮನೋಭಾವ ಹಾಗೂ ಬದ್ಧತೆಯುಳ್ಳ ಮಾನವ ಸಂಪನ್ಮೂಲವನ್ನು ಶಿಕ್ಷಣ ಮತ್ತು ಸಂಶೋಧನೆಯ ಮೂಲಕ ಸೃಜಿಸುವ ದೂರದೃಷ್ಠಿಯನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹೊಂದಿದೆ. ವಿಶ್ವವಿದ್ಯಾಲಯವು ತನ್ನ ಪ್ರಾರಂಭದ ದಿನದಿಂದಲೂ ಗ್ರಾಮೀಣ ಭಾಗದ ಜನರ ಜೀವನದ ಅರಿವು ಹಾಗೂ ಅನುಭವವನ್ನು ಅವಲೋಕಿಸುವ ಮತ್ತು ಶಿಕ್ಷಣ ಹಾಗೂ ಗ್ರಾಮೀಣ ಸಂವೇದನೆಯ ನಡುವಿನ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ ಒಟ್ಟು ಹತ್ತು ಸ್ನಾತ್ತಕೋತ್ತರ ಪದವಿ ಕಾರ್ಯಕ್ರಮಗಳಲ್ಲಿನ ವಿದ್ಯಾರ್ಥಿಗಳಿಗೆ ರೂರಲ್ ಇಮರ್ಶನ್ ಕಾರ್ಯಕ್ರಮವನ್ನು ಎರಡನೇ ಸೆಮಿಸ್ಟರ್‌ನಲ್ಲಿ ಕಲಿಕೆಯ ಭಾಗವಾಗಿ ಕಡ್ಡಾಯಗೊಳಿಸಿದೆ. ರೂರಲ್ ಇಮರ್ಶನ್ ಎಂದರೆ ವಿದ್ಯಾರ್ಥಿಗಳಿಗೆ ಹಳ್ಳಿಯ ಜೀವನವನ್ನು ವಿಭಿನ್ನವಾಗಿ ನೋಡಲು, ಮುಕ್ತ ಮನಸ್ಸಿನಿಂದ ಅರ್ಥಮಾಡಿಕೊಳ್ಳಲು, ಗ್ರಾಮದ ಸೌಂದರ್ಯವನ್ನು ಆಸ್ವಾದಿಸಲು, ಜನರ ಸ್ಥಳೀಯತೆಯನ್ನು ಗ್ರಹಿಸಿ, ಜೀವನೋಪಾಯದ ಆಯ್ಕೆಗಳನ್ನು ವಿಶ್ಲೇಷಿಸಲು ಬೇಕಾಗುವ ಕೌಶಲ್ಯಗಳನ್ನು ಒದಗಿಸುವ ಒಂದು ಮಾರ್ಗ. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ನೇರ ಭಾಗವಹಿಸುವಿಕೆಯಿಂದ ಕಲಿಕೆ ನಡೆಯುತ್ತದೆ. ಗ್ರಾಮದಜನ ಮತ್ತು ಅವರ ಮಾತುಗಳನ್ನು ಕೇಳುವುದರ ಮೂಲಕ ವಿದ್ಯಾರ್ಥಿಗಳು ವಾಸ್ತವಗಳನ್ನು ಹಾಗೂ ಸಮಸ್ಯೆಗಳನ್ನು ತಿಳಿದುಕೊಳ್ಳುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ.

ವಿಶ್ವ ವಿದ್ಯಾಲಯದಲ್ಲಿ ಗ್ರಾಮೀಣ ಇಮರ್ಶನ್ ಕಾರ್ಯಕ್ರಮವನ್ನು ಮೊದಲ ಸೆಮಿಸ್ಟರನ ಪರೀಕ್ಷೆಗಳು ಮುಗಿದ ನಂತರ ವಿದ್ಯಾರ್ಥಿಗಳುಒಂದು ತಿಂಗಳು ಅವಧಿಗೆ ಗ್ರಾಮೀಣ ಪ್ರದೇಶಗಳಲ್ಲಿ ಅಧ್ಯಯನಕ್ಕೆ ತೆರಳುತ್ತಾರೆ. ಈ ಕಾರ್ಯಕ್ರಮದ ಪೂರ್ವ ತಯಾರಿಯಾಗಿ, ಪ್ರತಿ ಕೋರ್ಸಿನ ಸಂಯೋಜಕರುಗಳು ಹಾಗೂ ಅಧ್ಯಾಪಕರುಗಳು ವಿದ್ಯಾರ್ಥಿಗಳಿಗೆ ರೂರಲ್ ಇಮರ್ಶನ್ ಕಾರ್ಯಕ್ರಮದ ದೃಷ್ಟಿಕೋನವನ್ನು ಸ-ವಿಸ್ತಾರವಾಗಿ ವಿವರಿಸಿ ಚಾಲನೆ ನೀಡುತ್ತಾರೆ.

ಒಂದು ತಿಂಗಳಿನ ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಹಳ್ಳಿಯನ್ನು ತನ್ನ ಅಧ್ಯಯನದ ಕೇಂದ್ರವನ್ನಾಗಿ ಆಯ್ಕೆಮಾಡಿ ಆ ಹಳ್ಳಿಗಳಲ್ಲಿನ ಜನಸಂಖ್ಯೆ, ಪುರುಷ ಮತ್ತು ಮಹಿಳೆಯರ ಪ್ರಮಾಣ, ಗ್ರಾಮದ ಸಾಕ್ಷರತಾ ಪ್ರಮಾಣ, ಸಮುದಾಯಗಳ ಹಂಚಿಕೆ, ಮೂಲಭೂತ ಸೌಕರ್ಯಗಳು, ಶಿಕ್ಷಣ, ಕೃಷಿ, ಆರೋಗ್ಯ ಹಾಗೂ ಆಡಳಿತ ಹೀಗೆ ಹಲವಾರು ವಿಷಯಗಳ ಕುರಿತು ಗ್ರಾಮೀಣ ಜನರ ಸಹಭಾಗಿತ್ವ (ಪಿ.ಆರ್.ಎ.) ವಿಧಾನದ ಮೂಲಕ ಮಾಹಿತಿ ಸಂಗ್ರಹಿಸುತ್ತಾರೆ. ಸಂಗ್ರಹಿಸಿದ ಮಾಹಿತಿ ಮತ್ತು ದತ್ತಾಂಶಗಳನ್ನು ಬಳಸಿ ಗ್ರಾಮದ ನಕಾಶೆ, ಸಂಪನ್ಮೂಲಗಳ ಗುರುತಿಸುವಿಕೆ, ಸಮುದಾಯಗಳ ಹಂಚಿಕೆ ನಕಾಶೆ ಮತ್ತು ಮೊಬಿಲಿಟಿ ನಕಾಶೆಯನ್ನು ತಯಾರಿಸುತ್ತಾರೆ.

ಒಟ್ಟಾರೆಯಾಗಿ ಗ್ರಾಮಗಳ ಸಮಸ್ಯೆಗಳನ್ನು ಅರಿತು ಅವುಗಳ ನಿವಾರಣೆಗೆ ಜನರ ಮಟ್ಟದಲ್ಲಿ ಮತ್ತು ಗ್ರಾಮಗಳ ಆಡಳಿತ ಮಟ್ಟದಲ್ಲಿ ಸಲಹೆಗಳನ್ನು ಸೂಚಿಸಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಾರೆ.

ಗ್ರಾಮೀಣ ಇಮರ್ಶನ್ ಕಾರ್ಯಕ್ರಮವು ವಿದ್ಯಾರ್ಥಿಗಳ ಕಲಿಕಾನುಭವವನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವದು ಎಂದು ಅರಿತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಮತ್ತು ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಶೈಕ್ಷಣಿಕ ವರ್ಷ 20120–21ನೇ ಸಾಲಿನಿಂದ ಗ್ರಾಮೀಣ ಇಮರ್ಶನ್ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಅತ್ಯುತ್ತಮ ಗ್ರಾಮೀಣ ಇಮರ್ಶನ್ ವರದಿ ಮಂಡನೆಗೆ ವಿಶ್ವವಿದ್ಯಾಲಯ ದಿಂದ ಪ್ರಮಾಣ ಪತ್ರ ಹಾಗೂ ಐದು ನಗದು ಬಹುಮಾನಗಳನ್ನು ನೀಡುವುದಾಗಿ ಘೋಷಣೆ ಮಾಡಿದರು. ಪ್ರಥಮ ಬಹುಮಾನ ರೂ.5000, ದ್ವಿತೀಯ ಬಹುಮಾನ ರೂ.4000, ತೃತೀಯ ಬಹುಮಾನ ರೂ.3000, ನಾಲ್ಕನೇ ಬಹುಮಾನ ರೂ.2000 ಹಾಗೂ ಐದನೇ ಬಹುಮಾನ ರೂ.1000 ಗಳನ್ನು ನಿಗದಿಮಾಡಲಾಗಿದೆ. ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕರು ಆಯ್ಕೆಗೆ ಸಂಬಂಧಿಸಿದ ಮಾನದಂಡಗಳ ಮಾರ್ಗಸೂಚಿಗಳನ್ನು ತಯಾರಿಸಿ ವಿ.ವಿ.ಯಿಂದ ಅನುಮತಿ ಪಡೆದರು. ಈ ವರದಿ ಮಂಡಣೆಯ ಮೌಲ್ಯಮಾಪನವನ್ನು ಮಾಡಲು ಕುಲಸಚಿವರ ಅಧ್ಯಕ್ಷತೆಯಲ್ಲಿ ಐದು ಸದಸ್ಯರನ್ನೊಳಗೊಂಡ ಬಾಹ್ಯ ಮೌಲ್ಯಮಾಪನ ಸಮಿತಿಯನ್ನು ಸಹ ರಚಿಸಲಾಯಿತು.

ಪ್ರಥಮ ಹಂತದಲ್ಲಿ ಪ್ರತಿ ಕೋರ್ಸಗಳಿಂದ ಒಟ್ಟು ವಿದ್ಯಾರ್ಥಿಗಳನ್ನು ಕಾರ್ಯಕ್ರಮದ ಸಂಯೋಜಕರುಗಳ ಎದುರು ವರದಿಯನ್ನು ಮಂಡಿಸಲಾಯಿತು. ಪ್ರತಿ ಕೋರ್ಸಗಳಿಂದ ಆರರಿಂದ ಏಳರಂತೆ ಒಟ್ಟು 61 ವಿದ್ಯಾರ್ಥಿಗಳನ್ನು ಎರಡನೇ ಹಂತಕ್ಕೆ ಆಯ್ಕೆ ಮಾಡಲಾಯಿತು. ನಂತರ ದಿನಾಂಕ 29.07.2021 ರಿಂದ 03.08.2021 ರವರೆಗೆ ಆನಲೈನ್ ಮೂಲಕ ಬಾಹ್ಯ ಮೌಲ್ಯಮಾಪನ ಸಮಿತಿಯ ಮುಂದೆ ವರದಿಗಳನ್ನು ಮಂಡಿಸಲಾಯಿತು. ನಂತರ ಒಟ್ಟು ಹತ್ತು ಅತ್ಯುತ್ತಮ ವರದಿ ಮಂಡನೆ ಮಾಡಿದ ವಿದ್ಯಾರ್ಥಿಗಳನ್ನು ಕೊನೆಯ ಹಂತಕ್ಕೆ ಆಯ್ಕೆ ಮಾಡಲಾಯಿತು. ದಿನಾಂಕ 19.08.2021ರಂದು ಕೊನೆಯ ಹಂತಕ್ಕೆ ಆಯ್ಕೆಯಾದ ಹತ್ತು ವಿದ್ಯಾರ್ಥಿಗಳು ನೇರವಾಗಿ ಬಾಹ್ಯ ಮೌಲ್ಯಮಾಪನ ಸಮಿತಿಯ ಮುಂದೆ ತಮ್ಮ ವರದಿಗಳನ್ನು ಮಂಡಿಸಿದರು. ವರದಿಗಳಲ್ಲಿನ ಮಾಹಿತಿ, ಮಂಡನೆಯ ಕೌಶಲ್ಯಗಳು, ನಕಾಶೆಗಳ ಪ್ರಸ್ತುತತೆ, ಪ್ರಕರಣ ಅಧ್ಯಯನ, ಗ್ರಾಮದ ಸಂಪೂರ್ಣ ತಿಳುವಳಿಕೆ ಮತ್ತು ವಿದ್ಯಾರ್ಥಿ ಕಲಿಕಾ ಅನುಭವಗಳ ಅಂಶಗಳನ್ನು ಪರಿಗಣಿಸಿ ಬಾಹ್ಯ ಮೌಲ್ಯಮಾಪನ ಸಮಿತಿಯು ಅಂತಿಮ ಐದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದರು.

## ಅಂತಿಮ ಹಂತದಲ್ಲಿ ಆಯ್ಕೆಯಾದ ಐದು ವಿದ್ಯಾರ್ಥಿಗಳು




**ಪ್ರಥಮ ಬಹುಮಾನ**
**ಕು. ಆಯೇಷಾ ಪರವೀನ್ ಕುಕನೂರ**
ಎಂ.ಕಾಂ. ವಿಭಾಗ,
ಮಾರ್ಗದರ್ಶಕರು **ಡಾ. ಅಭಯಕುಮಾರ ಗಸ್ತಿ,**
ಸಂಯೋಜಕರು, ಎಂ.ಕಾಂ. ವಿಭಾಗ.




**ದ್ವಿತೀಯ ಬಹುಮಾನ**

**ಕು. ಲಕ್ಷ್ಮೀ**

ಎಂ.ಪಿ.ಎಚ್ ವಿಭಾಗ,

ಮಾರ್ಗದರ್ಶಕರು **ಡಾ. ನಾಗವೇಣಿ ಎಸ್. ಜೆ.,**

ಸಂಯೋಜಕರು, ಎಂ.ಪಿ.ಎಚ್. ವಿಭಾಗ.




**ತೃತೀಯ ಬಹುಮಾನ**

**ಕು. ಶ್ರೀರಾಮ, ಅನ್ಸಾರಿ**

ಎಂ.ಎಸ್ಸಿ. ಜಿಯೊಇನ್ಫಾರ್‌ಮೆಟಿಕ್ಸ್ ವಿಭಾಗ,

ಮಾರ್ಗದರ್ಶಕರು **ಶ್ರೀ ಸುರೇಶ ಲಮಾಣಿ,**

ಸಂಯೋಜಕರು, ಎಂ.ಎಸ್ಸಿ. ಜಿಯೊಇನ್ಫಾರಮೆಟಿಕ್ಸ ವಿಭಾಗ.




**ನಾಲ್ಕನೇ ಬಹುಮಾನ**

**ಕು. ಪ್ರೀತಂ ಸಿ.ಜಿ.**

ಎಂ.ಬಿ.ಎ. ವಿಭಾಗ

ಮಾರ್ಗದರ್ಶಕರು **ಶ್ರೀ ಎಂ. ಬಿ. ಚನ್ನಪ್ಪಗೌಡರ,**

ಸಂಯೋಜಕರು, ಎಂ.ಬಿ.ಎ. ವಿಭಾಗ.




**ಐದನೇ ಬಹುಮಾನ**

**ಕು. ಪವಿತ್ರಾ ದ್ಯಾವನಗೌಡರ**

ಎಂ.ಬಿ.ಎ. ವಿಭಾಗ,

ಮಾರ್ಗದರ್ಶಕರು **ಶ್ರೀ ಎಂ. ಬಿ. ಚನ್ನಪ್ಪಗೌಡರ,**

ಸಂಯೋಜಕರು, ಎಂ.ಬಿ.ಎ. ವಿಭಾಗ.

ಎಲ್ಲ ವಿದ್ಯಾರ್ಥಿಗಳಿಗೂ ದಿನಾಂಕ 08.09.2021 ರಂದು ಜರುಗಿದ ಸವಿ ನೆನಪು ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರಮಾಣ ಪತ್ರ ಹಾಗೂ ನಗದು ಬಹುಮಾನಗಳನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಮತ್ತು ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ರವರು ವಿತರಣೆ ಮಾಡಿದರು.

Special Article



**Smt. Mangala V. Radder**
Co-ordinator,
English Communication Skills,
KSRDPR University, Gadag

## "Advanced Certificate Course in Communication Skills for Personality development and Employability"



### KSRDPRU - at glance

The Karnataka State Rural Development and Panchayat Raj University Act, 2016 was enacted for the establishment of a University for Rural Development and Panchayat Raj in the State of Karnataka for teaching, training, research on Sustainable Development and Panchayat Raj Institutions (PRIs). The University is being established with an intention to strengthen the local self-governance system and to give impetus for the study and research for bringing a comprehensive rural development in the State of Karnataka. The Karnataka State Rural Development and Panchayat Raj University has started its activities from the academic year 2017-18.

### Communication Skills :

Communication skills are needed for effective verbal communication and precision writing. Communication Skills are a set of skills that help listen well, express yourself and communicate clearly with clients, colleagues, subordinates, organizations, at business meetings and job interviews and improve both personal and professional relationships. Effective Communication makes one a more productive worker.

With this view to develop effective Communication Skills and impressive personality in the students, Karnataka State Rural Development and Panchayat Raj University, Gadag offers a program in "Advanced Certificate course in Communication Skills for Personality Development and Employability" to the aspiring students.

### Salient features :

- An integrated course with modules catering to both beginners as well as advance learners.
- Focus on Professional Listening, Speaking, Reading, Writing skills with ample practical exercises.
- Carefully designed sections on Conversation, Reading and writing.
- Focus on internet, social media as well as social media communication.
- Sequential building up of Listening, Speaking, Reading, Writing in a systematic manner and in a very short time.
- Focus on personality development which includes mental aspects.

### Course Justification and Objective :

- To enable the learner to acquire competence in the use of Communication Skills to meet every day needs.
- To help learner activate his/her career needs and use effective skills at workplace.
- To identify the barriers in effective communication
- To overcome obstacles, build up self-confidence
- To work in competitive multi-lingual sectors across the globe.

### Course Outcomes :

- By the end of the course, student shall be able to :
- Use Communication to meet every day Modes.
- Use Communication effectively in workplace.
- Become proficient in Communication and personality development.
- Understand how professional Communication works.
- Learn about body language and Communicative adjustment in the workplace while dealing challenging situation.
- Develop professional writing skills

## Resource Persons of the Course :



**Dr. M. G. Hegde** was formerly Dean of the School of Languages, Professor and Chair, Department of English at Rani Chennamma University, Belagavi, and Principal, Dr. A. V. Baliga College, Kumta. His Postdoctoral work under the UGC Research Award scheme won him D Lit from Rani Channamma University. His research projects have been funded by UGC, Ford Foundation and CSLC. He has guided six Ph. D. students.



**Dr. Shobha Nagnur** Dean College of Community Science, University of Agricultural Dharwad. worked in the area of Women in Agriculture, Empowerment of Women in Rural areas, Documentation of Indigenous Knowledge and Development of Multimedia Kits for Educating Rural Women.



**Dr. Madhuri Hebbalkar** presently working as a Director (Academics) of Annapoorna Institute of Management Research, Sankeshwar. As a Corporate Trainer she is on the Panel of AEQUS, an Aero Space Co., Bajaj Finserv for their certificate course (CPBFI). She had completed Master of Science from PG Dept. of KUD, Belgaum. Master of Philosophy from YCMOU, Nasik. Doctoral Programme from Sainth University, Ranchi. PGDOM from IGNOU and also Certified trainer and consultant.



**Mrs. Vandana shastry** is a certified Master Trainer, Mentor, coach, counsellor. Her work aims to promote study and research and facilitate diffusion of India's cultures and heritage in Multiple domains including spiritual, philosophical thought, knowledge and skills, traditions, yoga, literature, epics, art and cultural ethos. She has touched many lives and continues to be an inspiration for many Rural women, underprivileged children of government schools and slums, labours, students, parents, youths etc.



**Mrs. Pratibha Bhat** Lecturer in Department of English Shri Vidyadhiraj Polytechnic, Kumta. M.A in English, B.Ed, Diploma in Functional English. She has 13 years of teaching experience for Optional English, Functional English, Additional English, Basic English at the UG and +2 level. Gold Medal from RCUB for securing First rank at M. A Examination. Research thesis submitted to RCUB. As a hobby she writes popular fiction in Kannada and published more than a dozen novels.

**Dr. Arun Patil,** Executive Council Committee Member, KSRDPR University, Gadag. Director Smt.Kamala & Sri.Venkappa M.Agadi Charitable Trust (Regd) in 2004- 2017 . Co-ordinated entire College & hostels project at Laxmeshwar. Completed project in 5 years in 3 phases. Managing director Agadi Sunrise Hospital Private Limited Laxmeshwar in 2013 to 2016. Principal, Rural Engineering College Hulkoti. Professor & Head, Chemical Engineering Dept Rural Engineering College, Hulkoti in 1992-2004. Established Chemical Engineering Dept. at the college. Persuaded Dr.Krantz of Colarado State University, USA to donate 35 year of Chemical Abstracts to our college. Project on edible oil extraction & purification, Neem based pesticides; soap making from oil mill wastes were successfully studied & transferred to entrepreneurs. Conducted a workshop on Entrepreneurship prior to starting Gadag co-operative Industrial Estate. Senior Research Officer ACC Central Research Statio Thane-Maharashtra Worked on solid catalysts ( Pt on A/2O3)Molecular Sieves, cement additives, cement x-ray diffraction & surface acidity. This was a diversification project & had an opportunity of transferring technology from Lab to plant via pilot plant. Led a team of 15 engineers & researchers. Started monthly periodical called cement- Abstracts which was appreciated by technical people.



## Internal faculties:

**Sri. A. M. Mulla**

Rtd. Principal, Taj' Shamir Arts and commerce college, Gadag

**Dr. Abdu Aziz Mulla**

Asst. Director, Centre for Training Publications and Supervision

**Dr. Shashikanth H.**

M.Com Faculty, and Co-ordinator, Placement Cell

**Mangala V. Radder**

Co-ordinator, Communication Skills Professional


The constructs and sub-constructs of communication skills are skills that students should equip themselves with before they venture into the working world. These three skills can be combined and incorporated into the learning process. Students not only get to develop their communication skills through discussions and presentations in class, but also get to familiarize with communication situations in the real world. Therefore, we must all keep pushing and improving ourselves to help our university students to develop and hone their communication skills that is essential towards their future career development.

Special Article

# Excerpts from the book "SIGNIFICANCE OF GANDHI - AS A MAN & THINKER" by Dr. K G Saiyadian



**M.B.Channappagoudar**
MBA Program
Co-ordinator,
KSRDPR University,
Gadag




The author of this book Dr. K. G. Saiyadain (Khwaja Ghulam-us-Saiyadain - popularly known as KGS) was Educated at Aligarh Muslim University, he was an outstanding scholar and writer. He was a Director of Education in the State of Jammu and Kashmir from 1938-1945 and has written world class books on the subject of education and was recognised as an educational thinker. He was a visiting Professor of Education to leading Universities of the world. The three lectures in this book on the theme "Significance of Gandhi as a Man & Thinker" like - Gandhiji's lovable Personality; Gandhiji's Concept of Religion and Gandhiji's Concept of Culture, were delivered by Dr. K. G Saiyadian on December 29th to 31st in the year 1969, in All India Radio (AIR). Dr.KGS has dedicated this book to Badshah Khan i.e Khan Abdul Ghaffar Khan popularly known as Frontier Gandhi or Sarhadi Gandhi, an ardent follower of Gandhiji who had a very strong commitment to freedom struggle and non-violence.

## Lecture No. 1 – Gandhiji's Lovable Personality

Mahatma Gandhi was a man of great character. He always favored truth and honesty, condemned violence, kept himself away from the materialistic desires and walked a path of high moral. He maintained a life of simplicity and discipline. He was thrown into jail, beaten on the roads; many people conspired to kill him and many assassinations were attempted on his life. But he forgave them all. He always forgave the people who hurt and slashed at him. He lived as an ascetic. He believed in living each moment at fullest and concentrated at the task in hands. He never wasted his time looking back at the past or wondering what would happen in the future. When he was going to attend the Round Table Conference in London in 1931, he was asked by a customs official, "do you have anything to declare". To this he replied, "I am a poor mendicant (means a person who lives by begging and who survives off alms donated by others). My earthly processions consist of six spinning wheels, prison dishes, a can of goat's milk, six home spun loin cloths and towels and my reputation which cannot be much". For this the custom official was agast and just bowed and very courteously showed him the way and followed Gandhij. Such was his character and lovable personality. He was a celebrity who was recognized worldwide and yet remained unaffected by the limelight. Gandhiji had many great qualities, but there was one supreme quality in him which was the inspiration for all.

## Lecture No. 2 – Gandhiji's Concept of Religion

Gandhiji believed in the concept of Sarvadharma Samanatva, which means equal respect for all creeds and faiths. But he very clearly stated that equal regard does not mean that one should adopt other's religion. It only refers to understanding the opinions expressed by other religions while adhering to one's own views. Religion, as Gandhi viewed it, meant self-realisation, knowledge of self, where God rules every breath, that which prompts us to follow the path of truth and non-violence, that which deals with 'the science of soul'. To him, truth and non-violence were eternal, equal to religion, equal to God. Religion, as Gandhiji felt, expresses itself with the help of these two concepts. No doubt, Gandhi advocated strict adherence to these two virtues that are much crucial in taking man closer to God. The main aim of religion is to make a one-on-one interaction between God and humans. He believed God is identical with truth. He perceived God through the service of humanity, because God lives in the heart of every human being or for that matter in every one of his creations. Gandhi opined the ultimate aim of the human being is the vision of God and for this purpose, all activities - be it social, political or economic must aim at the realization of God. Like all men of deep faith, Gandhiji believed in the power of prayer which links a man to his maker and gives both a sense of peace and power and the inspiration to seek Truth and Godliness.

## Lecture No. 3 – Gandhiji's Concept of Culture

Speaking in a Conference at Allahabad on April 5, 1936, Gandhiji mentioned about Indian Culture, "Many of us are striving to produce a blend of all the cultures which seems today to be in clash with one another. No culture can live if it attempts to be exclusive. There is no such thing as pure Aryan Culture in existence in India Today. Whether the Aryans were indigenous to India or were unwelcome intruders, does not interest me much. What does interest me is the fact that my remote ancestors blended with one another with the utmost freedom and we of the present generation are a result of that blend." He further says, "I do not want my house to be walled in on all sides and my windows to be stuffed. I want the cultures of all the lands to be blown about my house as freely as possible. But I refuse to be blown off about my feet by any. I refuse to live in other people's houses as an interloper, a beggar or a slave. I refuse to put the necessary strain of learning English upon my sisters for the sake of false pride or questionable social advantage. I would have our young men and young women with literary tastes to learn as much of English and other world-languages as they like, and then expect them to give the benefits of their learning to India and to the world, like, a Bose, a Ray or the Poet himself. But I would not have a single Indian to forget, neglect or be ashamed of his mother tongue, or to feel that he or she cannot think or express the best thoughts in his or her own vernacular. Mine is not a religion of the prison-house. I am and I have been a determined opponent of modern civilization. I want you to turn your eyes today upon what is going on in Europe and if you have come to the conclusion that Europe is today groaning under the heels of the modern civilization, then you and your elders will have to think twice before you can emulate that civilization in our Motherland. Modern Civilization is a curse in Europe as also in India. War is the direct result of modern civilization". In one of the lines in the book Dr.KGS mentions – "The Noble Peace Committee did not award him the 'Prize for Peace' maybe for political reasons i suspect, but the whole world has opined and has conferred it on him several times, not only in the past, it will in the present and in future too".

"Generations to come will scarce believe that such a one as this ever in flesh and blood walked upon this earth" - Albert Einstein.














## ವಿಶ್ವವಿದ್ಯಾಲಯದ ಚಟುವಟಿಕೆಗಳು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ ಯವರ ನೇತೃತ್ವದಲ್ಲಿ ವಿಭಿನ್ನವಾಗಿ ಹಾಗೂ ತ್ವರಿತವಾಗಿ ಪ್ರಗತಿ ಹೊಂದುತ್ತಿದೆ. ಅದಕ್ಕೆ ಸಾಕ್ಷಿ ಎಂಬಂತೆ ವಿಶ್ವವಿದ್ಯಾಲಯದಲ್ಲಿ ವಿಶೇಷ ಹಾಗೂ ವಿಭಿನ್ನತೆಯಿಂದ ಕೂಡಿದ ಹತ್ತು ಹಲವಾರು ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳು ಜರುಗುತ್ತಿದ್ದು, ಅವುಗಳಲ್ಲಿ ಪ್ರಮುಖವಾದವುಗಳನ್ನು ಈಗಾಗಲೇ ಈ ಪತ್ರಿಕೆಯ ಮೊದಲನೇ ಹಾಗೂ ಎರಡನೇ ಆವೃತ್ತಿಯಲ್ಲಿ ಬಿಂಬಿಸಲಾಗಿದೆ. ಎಂದಿನಂತೆ ವಿಶ್ವವಿದ್ಯಾಲಯವು 2021 ರ ಜುಲೈ ಯಿಂದ ಸೆಪ್ಟೆಂಬರ್ ತಿಂಗಳಲ್ಲಿ ಕೂಡ ಹಲವಾರು ವಿಶಿಷ್ಟವಾದ ಯೋಜನೆ ಹಾಗೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು ಅದರಲ್ಲಿ ಪ್ರಮುಖವಾದ ವುಗಳ ವಿವರ ಈ ಕೆಳಗಿನಂತಿದೆ.







# ಕೋವಿಡ್-19 ಲಸಿಕಾ ಜಾಗೃತಿ ಅಭಿಯಾನ



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಎಂ.ಎ. ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗಗಳ ಸಹಯೋಗ ಮತ್ತು ಗ್ರಾಮ ಪಂಚಾಯಿತಿಗಳ ಸಹಕಾರದೊಂದಿಗೆ ಗದಗ ಮತ್ತು ಮುಂಡರಗಿ ತಾಲ್ಲೂಕಿನ ಆಯ್ದ ಗ್ರಾಮಗಳಲ್ಲಿ "ಕೋವಿಡ್-19 ಲಸಿಕಾ ಜಾಗೃತಿ ಅಭಿಯಾನ"ಕ್ಕೆ ಹರ್ತಿ ಗ್ರಾಮ ಪಂಚಾಯಿತಿಯಲ್ಲಿ ಚಾಲನೆ ದೊರೆಯಿತು.

ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಅಭಿಯಾನಕ್ಕೆ ಚಾಲನೆಯನ್ನು ನೀಡಿ ಮಾತನಾಡಿದರು. ಡಾ. ನಾಗವೇಣಿ ಎಸ್. ಜೆ. ಯವರು ಕರೋನಾ 3ನೇ ಅಲೆಯ ಕುರಿತು ಮಾಹಿತಿ ನೀಡಿದರು. ಕುಮಾರಿ ನಮಿತಾ ಎಂ. ವೈ. ಅವರು ಕರೋನವನ್ನು ತಡೆಗಟ್ಟುವಲ್ಲಿ ಪೌಷ್ಟಿಕ ಆಹಾರದ ಮಹತ್ವ ಕುರಿತು ತಿಳಿಸಿದರು. ತದನಂತರ ಗ್ರಾಮದ ಮುಖ್ಯ ಬೀದಿ ಹಾಗೂ ಮನೆಗಳಿಗೆ ತೆರಳಿ ಲಸಿಕೆಯ ಕುರಿತು ಅರಿವು ಮೂಡಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹರ್ತಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಸೋಮರಡ್ಡಿ ನಡುವೂರ ಅವರು ವಹಿಸಿದ್ದರು. ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಶಿವಲೀಲಾ ಅಂಗಡಿ ಅವರು, ವಿಶ್ವವಿದ್ಯಾಲಯದ ಉಪನ್ಯಾಸಕರು, ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಮತ್ತು ಆಶಾ ಕಾರ್ಯಕರ್ತೆಯರು ಎನ್.ಎಸ್.ಎಸ್. ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಯೋಗ ಕ್ಷೇಮ ಯೋಗ ಕೇಂದ್ರದ "ಯೋಗ ಸಾಧನೆಯ ಒಂದು ಸಾರ್ಥಕ ವರ್ಷ" ಮತ್ತು ಯೋಗ ನಿರಂತರ ಕಾರ್ಯಕ್ರಮ



ಕರ್ನಾಟಕ ರಾಜ್ಯ ಗ್ರಾಮೀಣಾವೃದ್ದಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ, ದೈಹಿಕ ಶಿಕ್ಷಣ ಕ್ರೀಡಾ ನಿರ್ದೇಶನಾಲಯದ, "ಯೋಗಕ್ಷೇಮ ಯೋಗ ಕೇಂದ್ರ"ದ ವತಿಯಿಂದ "ಯೋಗ ಸಾಧನೆಯ ಒಂದು ಸಾರ್ಥಕ ವರ್ಷ" ಮತ್ತು ಯೋಗ ನಿರಂತರ ಎಂಬ ಕಾರ್ಯಕ್ರಮದಲ್ಲಿ ಅಧ್ಯಕ್ಷೀಯ ನುಡಿಗಳನ್ನಾಡಿದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಯೋಗದ ಇನ್ಫೋಗ್ರಾಫಿಕ್ ಬಿಡುಗಡೆ ಮಾಡಿ ಈ ಕಾರ್ಯಕ್ರಮ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಮತ್ತು ನಡೆಯುತ್ತಲಿರುವ ಯೋಗ ಚಟುವಟಿಕೆಗಳ ಕೊನೆಯಲ್ಲ ಇದು ಹೊಸ ಆರಂಭ, ಕಾರ್ಯಕ್ರಮದ ಶೀರ್ಷಿಕೆ ಹೇಳುವಂತೆ ಇಲ್ಲಿ ಯೋಗ ಚಟುವಟಿಕೆಗಳು ನಿರಂತರವಾಗಿ ಮುಂದಿನ ದಿನಗಳಲ್ಲಿಯೂ ನಡೆಯಲಿದೆ. ಸ್ವಸ್ಥ ಮತ್ತು ಸಮೃದ್ಧ ಆರೋಗ್ಯಕರ ಸಮಾಜ ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಕಾವ್ಯಾ ಶಾ., ಅಂತರಾಷ್ಟ್ರೀಯ ಆರೋಗ್ಯ ಮತ್ತು ಜೀವನ ಶೈಲಿ ತರಬೇತುದಾರರು ಮತ್ತು ಕನ್ನಡ ಚಿತ್ರರಂಗದ ಉದಯೋನ್ಮುಖ ನಟಿ, ಉಪಸ್ಥಿತರಿದ್ದರು. ಪ್ರೀತಿ ವಿ. ಹಡಗಲಿ, ಯೋಗ ತರಬೇತುದಾರರು, ಜಿಲ್ಲಾ ಆಯುಷ್ ಇಲಾಖೆ, ಗದಗ ಇವರು ಯೋಗ ಪ್ರದರ್ಶನವನ್ನು ಮಾಡಿದರು.

# ಕೋವಿಡ್–19 ಸನ್ನಿವೇಶದಲ್ಲಿ ಮಕ್ಕಳ ಆತ್ಮಸ್ಥೈರ್ಯವನ್ನು ವೃದ್ಧಿಸುವಲ್ಲಿ ಶಿಕ್ಷಕರ ಪಾತ್ರ


ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಿಂದ "ಕೋವಿಡ್–19 ಸನ್ನಿವೇಶದಲ್ಲಿ ಮಕ್ಕಳ ಆತ್ಮಸ್ಥೈರ್ಯವನ್ನು ವೃದ್ಧಿಸುವಲ್ಲಿ ಶಿಕ್ಷಕರ ಪಾತ್ರ" ಎಂಬ ವಿಷಯದ ಕುರಿತು ದಿನಾಂಕ 30.06.2021 ರಂದು ಆನ್‌ಲೈನ್‌ನಲ್ಲಿ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಈ ಕೋವಿಡ್–19 ಸನ್ನಿವೇಶದಲ್ಲಿ ಶಾಲೆಗಳ ಪ್ರಸ್ತುತ ಸ್ಥಿತಿಗತಿ ಕುರಿತು ಮಾತನಾಡುತ್ತ, ಕೋವಿಡ್–19 ಸನ್ನಿವೇಶದಲ್ಲಿ ಶಿಕ್ಷಕರು ಸಮಸ್ಯೆ ಮತ್ತು ಸವಾಲುಗಳನ್ನು ಹೇಗೆ ಎದುರಿಸಬೇಕೆಂಬುದನ್ನು ತಿಳಿಸಿದರು ಹಾಗೂ ಮಕ್ಕಳು ಶಿಕ್ಷಕರು ಹಾಗೂ ಸಾರ್ವಜನಿಕರೆಲ್ಲರೂ ಲಸಿಕೆಯನ್ನು ಹಾಕಿಸಿಕೊಳ್ಳಬೇಕೆಂದು, ಜಾಗೃತಿ ಆಂದೋಲವನ್ನು ಮಾಡಬೇಕೆಂದು ವಿಶ್ವವಿದ್ಯಾಲಯವು ನಿಮ್ಮ ಜೊತೆ ಇರುತ್ತದೆ, ಎಂದು ತಿಳಿಸಿದರು.




ಶ್ರೀ ಬಸಲಿಂಗಪ್ಪ, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಪ್ರೊ. ವಿ. ವಿ. ಮಳಗಿಯವರು ಆಗಮಿಸಿದ್ದರು.

# ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ 8ನೇ ಗಾಂಧಿ ಚಿಂತನ–ಮಂಥನ ಮತ್ತು ಸತ್ಸಂಗ ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ದಿನಾಂಕ: 11.07.2021 ರಂದು ಸಾಯಂಕಾಲ 4.00 ಗಂಟೆಗೆ 8ನೇಯ ಗಾಂಧಿ ಚಿಂತನ–ಮಂಥನ ಮತ್ತು ಸತ್ಸಂಗ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಶ್ರೀ ಶಿವಯೋಗಿ ಹಾಗೂ ಕಲಾ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ., ವಿಶ್ವವಿದ್ಯಾಲಯದ ಎಂ.ಬಿ.ಎ. ವಿಭಾಗದ ಸಂಯೋಜಕರಾದ ಶ್ರೀ ಎಂ. ಬಿ. ಚನ್ನಪ್ಪಗೌಡರ ಅವರು, ಆಶ್ರಮದ ಸಂಚಾಲಕರಾದ ಶ್ರೀ ಪ್ರಕಾಶ ಎಸ್. ಮಾಚೇನಹಳ್ಳಿ ಮತ್ತು ಆಶ್ರಮದ ಪ್ರಶಿಕ್ಷಣಾರ್ಥಿಯಾದ ಶ್ರೀ ದೇವರಾಜ ದೊಡ್ಡಮನಿ ಅವರು ಉಪಸ್ಥಿತರಿದ್ದರು.



## ಹೊಸ ಶಿಕ್ಷಣ ನೀತಿ 2020ರ ಅನುಷ್ಠಾನದ ಕುರಿತು ಒಂದು ದಿನದ ಕಾರ್ಯಗಾರ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಖಾತ್ರಿ ಕೋಶ (IQAC)ವತಿಯಿಂದ "ವಿಶ್ವವಿದ್ಯಾಲಯದಲ್ಲಿ ಹೊಸ ಶಿಕ್ಷಣ ನೀತಿ 2020ರ ಅನುಷ್ಠಾನ"ದ ಕುರಿತು ಒಂದು ದಿನದ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಹೊಸ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ಶಿಕ್ಷಣ ಸಂಸ್ಥೆಗಳ ಮತ್ತು ಶಿಕ್ಷಕರ ಪಾತ್ರ ಮಹತ್ತರವಾಗಿದ್ದು, ಈ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಹೊಸತರದ ಬದಲಾವಣೆಯನ್ನು ತರಲಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಇದೇ ಶೈಕ್ಷಣಿಕ ವರ್ಷದಿಂದ ಹೊಸ ಶಿಕ್ಷಣ ನೀತಿಯ ಅಡಿಯಲ್ಲಿ ಪದವಿ ಕೋರ್ಸುಗಳನ್ನು ಪರಿಚಯಿಸಲಿದೆ ಎಂದು ಹೇಳಿದರು.

ಪ್ರೊ. ಎಂ. ಕೆ. ಶ್ರೀಧರ್ ಮಾಜಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ನಿರ್ವಹಣಾ ಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಹೊಸ ಶಿಕ್ಷಣ ನೀತಿಯ ಕರಡು ಸಮಿತಿಯ ಸದಸ್ಯರು ಇವರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ನಂತರ ಡಾ. ರಾಜೇಂದ್ರ ಕುಮಾರ್ ಜೋಶಿ ಹಿರಿಯ ಶಿಕ್ಷಣ ಸಲಹೆಗಾರರು CESS ಬೆಂಗಳೂರು ಹಾಗೂ ಡಾ. ಪದ್ಮಾವತಿ ಬಿ. ಎಸ್. ಪ್ರಾಧ್ಯಾಪಕರು CESS, ಬೆಂಗಳೂರು ಇವರು ಕಾರ್ಯಗಾರದಲ್ಲಿ ವಿಷಯ ಮತ್ತು ಚರ್ಚೆಯನ್ನು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ್ ಜೆ. ಸಿ. ಅವರು ಹಾಗೂ ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಉಪನ್ಯಾಸಕರು ಉಪಸ್ಥಿತರಿದ್ದರು.

## ತೀವ್ರ ಅಪೌಷ್ಠಿಕ ಮಕ್ಕಳ ಸುಧಾರಣಾ ಶಿಬಿರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಗದಗ ಅವರ ಸಹಯೋಗದೊಂದಿಗೆ ತೀವ್ರ ಅಪೌಷ್ಠಿಕ ಮಕ್ಕಳ ಸುಧಾರಣಾ ಶಿಭಿರದಲ್ಲಿ ಪೌಷ್ಠಿಕ ಆಹಾರ ಜಾಗೃತಿ ಕಾರ್ಯಕ್ರಮವನ್ನು ದಿನಾಂಕ 28.07.2021 ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ಎಚ್. ಎಸ್. ಜೋಗೇರ್, ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಗದಗ, ಶ್ರೀಮತಿ ಗಿರಿಜಾ ದೊಡ್ಡಮನಿ, ಸಹಾಯಕ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಗದಗ, ರೇಣುಕಾ ಕೊಟೆನ್ನವರ, ಹಿರಿಯ ಮೇಲ್ವಿಚಾರಕರು, ಗದಗ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಅತಿಥಿ ಉಪನ್ಯಾಸಕರುಗಳಾದ ಡಾ. ಸಾವಿತ್ರಿ ಬ್ಯಾಡಗಿ, ಡಾ. ದೀಪಾ ಎಸ್. ಪಾಟೀಲ, ಹಾಗೂ ಕುಮಾರಿ ನಮಿತಾ ಎಂ. ವೈ. ಅವರು ಭಾಗವಹಿಸಿದ್ದರು.

ಡಾ. ಸಾವಿತ್ರಿ ಬ್ಯಾಡಗಿ ರವರು ಪೌಷ್ಠಿಕ ಆಹಾರದ ಮಹತ್ವವನ್ನು ತೀವ್ರ ಅಪೌಷ್ಠಿಕ ಮಕ್ಕಳ ತಾಯಂದಿರನ್ನು ಉದ್ದೇಶಿಸಿ ಮಾತನಾಡಿದರು. ಡಾ. ದೀಪಾ ಎಸ್. ಪಾಟೀಲರವರು ತಾಯಂದಿರ ಜೊತೆ ಆಪ್ತಸಮಾಲೋಚನೆ ನಡೆಸಿ ದಿನ ನಿತ್ಯದ ಮಕ್ಕಳ ಆಹಾರ ಕ್ರಮದ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂವಿಧಾನದ ಮೂಲ ಪ್ರತಿ

ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಯವರು ಮಾನ್ಯ ಕುಲಸಚಿವರಾದ ಪ್ರೊ. ಡಾ. ಬಸವರಾಜ್ ಎಲ್. ಲಕ್ಕಣ್ಣವರ ಹಾಗೂ ಶ್ರೀ ಶಶಿಭೂಷಣ ಜಿ. ದೇವೂರ ಅವರ ಸಮ್ಮುಖದಲ್ಲಿ ವಿಶ್ವವಿದ್ಯಾಲಯದ ಸಹಾಯಕ ಗ್ರಂಥಪಾಲಕರಾದ ಶ್ರೀ ಆನಂದಗೌಡ ಪಿ. ಫಕೀರಗೌಡ ಅವರಿಗೆ ಮೂಲ ಸಂವಿಧಾನದ ನಕಲು ಪ್ರತಿಯನ್ನು ಹಸ್ತಾಂತರಿಸಿದರು.

ಸ್ವತಂತ್ರ್ಯ ಭಾರತದ ಪ್ರಜಾಪ್ರಭುತ್ವ ರಾಷ್ಟ್ರಕ್ಕಾಗಿ ರಚನೆಗೊಂಡ ಭಾರತದ ಮೂಲ ಸಂವಿಧಾನದ ನಕಲು ಪ್ರತಿಯು ಎರಡು ವರ್ಷಗಳ ಹಿಂದೆ ದೆಹಲಿಯಿಂದ ಅಂಚೆ ಮೂಲಕ ಗದಗದ ಕರ್ನಾಟಕ ರಾಜ್ಯ ಗಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಬಂದು ತಲುಪಿದ್ದು, ಗದಗ ನಗರದ ಮತ್ತು ಸುತ್ತಮುತ್ತಲಿನ ಸಾರ್ವಜನಿಕರು ಸಂವಿಧಾನದ ಮೂಲ ಪ್ರತಿಯು ಸದುಪಯೋಗ ಪಡೆದುಕೊಳ್ಳಲು ಜೊತೆಗೆ ಆಸಕ್ತರ ಮತ್ತು ವಿದ್ಯಾರ್ಥಿಗಳ ವೀಕ್ಷಣೆಗೆ ಹಾಗೂ ಜ್ಞಾನಾರ್ಜನೆಗೆ ಅನುಕೂಲಕರವಾಗಲಿದೆ. ಭಾರತದ ಮೂಲ ಸಂವಿಧಾನವು ಟೈಪ್ ರೈಟಿಂಗ್ ಹಾಗೂ ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಸ್ವಯಂ ಹಸ್ತಾಕ್ಷರದಲ್ಲಿ ರೂಪುಗೊಂಡಿದೆ.

ಈ ಮೂಲ ಸಂವಿಧಾನದ ನಕಲು ಪ್ರತಿ ಕರ್ನಾಟಕದ ಮೈಸೂರು ಅರಮನೆ, ಮಧ್ಯ ಪ್ರದೇಶದ ಮಾಧವರಾವ್ ಸಿಂಧ್ಯಾ ಅವರ ಗ್ವಾಲಿಯರ್ ಅರಮನೆ, ಹೈದ್ರಾಬಾದ್‌ನ ಸಾಲರಜಂಗ್ ವಸ್ತು ಸಂಗ್ರಹಾಲಯ, ದೆಹಲಿಯ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯ ಸೇರಿದಂತೆ ದೇಶದ ಹಲವು ಸಂಸ್ಥೆಗಳಲ್ಲಿ ಸಂರಕ್ಷಿಸಿ ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿದೆ. ಇದೀಗ ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲೂ ಸಂವಿಧಾನದ ಮೂಲ ಪ್ರತಿಯ ವೀಕ್ಷಣೆ ಹಾಗೂ ಜ್ಞಾನಾರ್ಜನೆಗೆ ಅನುಕೂಲವಾಗಲಿದೆ ಎಂದು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಯವರು ತಿಳಿಸಿದರು.




ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು
ಮಾನ್ಯ ಕುಲಸಚಿವರಾದ ಡಾ. ಬಸವರಾಜ್ ಎಲ್. ಲಕ್ಕಣ್ಣವರ
ಹಾಗೂ ಶ್ರೀ ಶಶಿಭೂಷಣ ಜಿ. ದೇವೂರ ಅವರ ಸಮ್ಮುಖದಲ್ಲಿ
ವಿಶ್ವವಿದ್ಯಾಲಯದ ಸಹಾಯಕ ಗ್ರಂಥಪಾಲಕರಾದ ಶ್ರೀ ಆನಂದಗೌಡ ಪಿ. ಫಕೀರಗೌಡ ಅವರಿಗೆ
ಮೂಲ ಸಂವಿಧಾನದ ನಕಲು ಪ್ರತಿಯನ್ನು ಹಸ್ತಾಂತರಿಸಿದರು.

# ವಿಶ್ವವಿದ್ಯಾಲಯದ
# ಮನೋಚೇತನ ಆಪ್ತಸಮಾಲೋಚನ ಕೇಂದ್ರದ ಕಾರ್ಯಗಾರ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಮನೋಚೇತನ ಆಪ್ತಸಮಾಲೋಚನ ಕೇಂದ್ರದ ಅಡಿಯಲ್ಲಿ ದತ್ತು ತೆಗೆದುಕೊಂಡ ಶಾಲೆಗಳ ಶಿಕ್ಷಕರಿಗೆ ಮತ್ತು ಪದವಿಪೂರ್ವ ಮಹಾವಿದ್ಯಾಲಯದ ಉಪನ್ಯಾಸಕರಿಗೆ ಆಪ್ತಸಮಾಲೋಚನೆಯ ತರಬೇತಿ ಕಾರ್ಯಗಾರವನ್ನು 31/07/2021 ರಂದು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ. ವಿಜಯಲಕ್ಷ್ಮಿ ಅಮ್ಮಿನಭಾವಿ ಮನೋವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಡಾ. ಜಿತೇಂದ್ರ ಮುಗಳಿ, ಜಿಲ್ಲಾ ಆಸ್ಪತ್ರೆ, ಗದಗ, ಡಾ. ತಾರಾಚಂದ ನಾಯ್ಕ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಗದಗ ಇವರುಗಳು ಆಗಮಿಸಿದ್ದು, ಹದಿಹರೆಯದವರು ಎದುರಿಸುವ ಮಾನಸಿಕ ಸಮಸ್ಯೆ ಮತ್ತು ಆಪ್ತಸಮಾಲೋಚನೆ ವಿಷಯದ ಬಗ್ಗೆ ಸಂಪೂರ್ಣವಾದ ತರಬೇತಿಯನ್ನು ನೀಡಿ ಪ್ರಮಾಣ ಪತ್ರವನ್ನು ವಿತರಿಸಿದರು.



# ಜೈವಿಕ ಇಂಧನ ಘಟಕ ಚಾಲನೆ

ಅಂತರಾಷ್ಟ್ರೀಯ ಜೈವಿಕ ದಿನದಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಜೈವಿಕ ಇಂಧನ ಘಟಕಕ್ಕೆ ಚಾಲನೆ ನೀಡಲಾಯಿತು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಕಿರಣ್ ಕುಮಾರ್ ಅವರು ಜೈವಿಕ ಇಂಧನ ಘಟಕವನ್ನು ಉದ್ಘಾಟಿಸಿ ಜೈವಿಕ ಇಂಧನದ ಮಹತ್ವ, ಮಂಡಳಿ ಮಾಡುತ್ತಿರುವ ಕಾರ್ಯಕ್ರಮಗಳು ಮತ್ತು ಯೋಜನೆಯನ್ನು ತಿಳಿಸಿದರು. ವಿಶೇಷ ಅತಿಥಿಗಳಾಗಿ ಜೈವಿಕ ಇಂಧನದ ವಿಜ್ಞಾನಿಯಾದ ಶ್ರೀ ವೈ. ಬಿ. ರಾಮಕೃಷ್ಣ ಅವರು ಆಗಮಿಸಿ ಮಾತನಾಡಿದರು. ಕರ್ನಾಟಕ ಸಾರಿಗೆ ಸಂಸ್ಥೆಯ ವಿಭಾಗೀಯ ನಿರ್ದೇಶಕರಾದ ಶ್ರೀ ಹಿರೇಮಠ್ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ವಿಶ್ವವಿದ್ಯಾಲಯ ಗ್ರಾಮೀಣ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ರೂಪಿಸುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ರವರು ಉಪಸ್ಥಿತರಿದ್ದರು ಹಾಗೂ ಇನ್ನೂ ಅನೇಕ ಗಣ್ಯರು, ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ರೈತರು ಭಾಗವಹಿಸಿದ್ದರು.






## ದಿಂಡೂರಿನಲ್ಲಿ ವಾಂತಿ ಭೇದಿ ಕಾಯಿಲೆ ಹರಡುವಿಕೆ ಕುರಿತು ಸರ್ವೆ



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಿಂದ ದಿಂಡೂರಿನಲ್ಲಿ ವಾಂತಿ ಭೇದಿ ಕಾಯಿಲೆ ಹರಡುವಿಕೆ ಕುರಿತು ಸರ್ವೆ ಮಾಡಲಾಯಿತು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಾರ್ವಜನಿಕ ಆರೋಗ್ಯ ವಿಭಾಗದಿಂದ ರೋಣ ತಾಲೂಕಿನ, ರಾಜೂರು ಗ್ರಾಮ ಪಂಚಾಯತಿಗೆ ಒಳಪಡುವ ದಿಂಡೂರ ಗ್ರಾಮದಲ್ಲಿ ಎರಡು ಮೂರು ವಾರದಿಂದ ಸಂಭವಿಸುತ್ತಿರುವ ವಾಂತಿ ಭೇದಿ ಕಾಯಿಲೆಯ ಸಾಂಕ್ರಾಮಿಕ ರೋಗ ಹರಡುವಿಕೆ ಬಗ್ಗೆ ಅಧ್ಯಯನ ಮಾಡಿ ಗ್ರಾಮಸ್ತರಲ್ಲಿ ಅರಿವು ಮೂಡಿಸುವ ಮತ್ತು ಕಾಯಿಲೆ ತಡೆಗಟ್ಟುವ ಉಪಾಯಗಳನ್ನು ತಿಳಿಸಲು ತೆರಳಿ, ಗ್ರಾಮದಲ್ಲಿ ಪ್ರತಿ ಮನೆಗೂ ಭೇಟಿ ನೀಡಿ, ಕಾಯಿಲೆ ರೋಗ ಲಕ್ಷಣಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಮಾಹಿತಿ ಪಡೆದು, ಕಾಯಿಲೆ ತಡೆಗಟ್ಟುವ ಬಗ್ಗೆ ತಿಳುವಳಿಕೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರಲ್ಲಿ ಚರ್ಚಿಸಿದಾಗ ಅವರು ತಿಂಗಳ ಹಿಂದೆ ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಹೊಸದಾಗಿ ಅಳವಡಿಸಿರುವ ನೀರಿನ ಸಂಪರ್ಕವನ್ನು ಅಸಮರ್ಪಕವಾಗಿ ಮಾಡಿರುವುದೇ ಕಾರಣ ಎಂದು ತಿಳಿಸಿದರು.

ಪ್ರೊ. ಡಾ. ಸುರೇಶ್ ಕೃಷ್ಣರಾವ್ ಅವರ ಮಾರ್ಗದರ್ಶನದಲ್ಲಿ ಉಪನ್ಯಾಸಕರಾದ ಡಾ. ನಾಗವೇಣಿ ಎಸ್. ಜೆ., ಡಾ. ಗೂಳಪ್ಪ ದೇವಗಪ್ಪನವರ ಮತ್ತು ಕೃಪಾ ಅವರು ವಿದ್ಯಾರ್ಥಿಗಳೊಂದಿಗೆ ಸರ್ವೇ ಕಾರ್ಯದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ಆರೋಗ್ಯ ವಿಭಾಗದ ಈ ಕಾರ್ಯವನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ ಮತ್ತು ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

## ವಿಶ್ವವಿದ್ಯಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಆಚರಣೆ



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯದಲ್ಲಿ 75ನೇ ಸ್ವಾತಂತ್ರ್ಯ ಮಹೋತ್ಸವ (ಅಜಾದಿಕಾ ಅಮೃತ್ ಮಹೋತ್ಸವನ್ನು) ವಿಜೃಂಭಣೆಯಿಂದ ಆಚರಿಸಲಾಯಿತು. ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು 75ನೇ ಸ್ವಾತಂತ್ರ್ಯ ಮಹೋತ್ಸವದ ಧ್ವಜಾರೋಹಣವನ್ನು ನೆರವೇರಿಸಿ, ಮಾತನಾಡಿದರು. ಡಂಬಳ ಗ್ರಾಮದ ನಿವೃತ್ತ ಯೋಧರಾದ ಶ್ರೀ ಪರಶುರಾಮ ಸಿದ್ಧಪ್ಪ ಕದಡಿ ಅವರು 75ನೇಯ ಸ್ವಾತಂತ್ರ್ಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಅಮೃತ್ ಸ್ವಾತಂತ್ರ್ಯ ಮಹೋತ್ಸವದ ಪ್ರಯುಕ್ತವಾಗಿ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ಸ್ಥಾಪಿಸಿದ ಧ್ವಜಸ್ತಂಭವನ್ನು ಉದ್ಘಾಟಿಸಲಾಯಿತು ಹಾಗೂ ಅಮೃತ ವನದ ಹೆಸರಿನಲ್ಲಿ 75 ಸಸಿಗಳನ್ನು ನೆಡಸಲಾಯಿತು. ಜೊತೆಗೆ ಸೈಕಲ್ ಸದ್ಬಳಕೆ ಹಾಗೂ ಘನ ತ್ಯಾಜ್ಯದಿಂದ ಎರೆಹುಳು ಗೊಬ್ಬರ ತಯಾರಿಕೆಗೆ ಚಾಲನೆಯನ್ನು ನೀಡಲಾಯಿತು.

ತದನಂತರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಉದ್ಯೋಗ ಕೋಶದ ವತಿಯಿಂದ ಎನ್.ಆರ್.ಎಲ್.ಎಂ. ಸಂಸ್ಥೆಗೆ ನೇಮಕವಾದ ವಿದ್ಯಾರ್ಥಿಗಳಿಗೆ ಆದೇಶ ಪತ್ರವನ್ನು ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ವಿತ್ತಾಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಅವರು ಉಪಸ್ಥಿರಿದ್ದರು. ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಎಲ್ಲಾ ವಿದ್ಯಾರ್ಥಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

## ಗದಗ ಜಿಲ್ಲೆಯ ಪದವಿ–ಪೂರ್ವ ಮತ್ತು ಪದವಿ ಮಹಾವಿದ್ಯಾಲಯಗಳಿಗೆ ಕ್ರೀಡಾ ಸ್ಪರ್ಧೆಗಳು

ಕ್ರೀಡಾಪಟುಗಳ ಕ್ರೀಡಾಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದೊಂದಿಗೆ ಗದಗ ಜಿಲ್ಲೆಯ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯಗಳ ಅಂತರ ಮಹಾವಿದ್ಯಾಲಯಗಳ ಗುಡ್ಡುಗಾಡು ಓಟದ ಸ್ಪರ್ಧೆಯನ್ನು ದಿನಾಂಕ 29.08.2021 ರಂದು ಮುಂಜಾನೆ 6:30 ಕ್ಕೆ ಆಯೋಜಿಸಲಾಗಿತ್ತು. ಈ ಓಟದ ಸ್ಪರ್ಧೆಯಲ್ಲಿ 14 ವಿದ್ಯಾರ್ಥಿಗಳು 13 ವಿದ್ಯಾರ್ಥಿನಿಯರು ಭಾಗವಹಿಸಿದ್ದರು, ಶ್ರೀ ಬಸವರಾಜ ಇಂಗಳಗಿ, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಗುಡ್ಡುಗಾಡು ಓಟದ ಸ್ಪರ್ಧೆಯ ವಿಜೇತರು ಓಟದ ಸ್ಪರ್ಧೆಗೆ ಚಾಲನೆ ನೀಡಿದರು, ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಇವರು ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದರವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ ಮಾಡಿ, ಕ್ರೀಡಾ ಸ್ಪೂರ್ತಿಯನ್ನು ಹೆಚ್ಚಿಸಲು ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ದಿನದಂದು ಸ್ಪರ್ಧೆಗಳನ್ನು ಆಯೋಜಿಸಿರುವುದು ಸಂತಸದ ವಿಷಯವೆಂದು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಮಾತನಾಡಿದರು.

ಮುಂದುವರೆದು, ದಿನಾಂಕ: 05.09.2021 ರಂದು ಮುಂಜಾನೆ 9 ಘಂಟೆಗೆ ಖೋ–ಖೋ, ವಾಲ್ಡಿಬಾಲ್ ಹಾಗೂ ಕಬಡ್ಡಿ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವನ್ನು ಪ್ರಾರಂಭ ಮಾಡಲಾಯಿತು. ಪ್ರೊ. ಬಸವರಾಜ ಎಲ್. ಲಕ್ಕಣ್ಣವರ, ಮಾನ್ಯ ಕುಲಸಚಿವರು ಎಲ್ಲರನ್ನೂ ಸ್ವಾಗತಿಸಿದರು. ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಮಾನ್ಯ ಕುಲಪತಿಗಳು ಸಮಾರಂಭವನ್ನು ಉದ್ಘಾಟಿಸಿದರು. ಮಹಿಳೆಯರ ಖೋ–ಖೋ ಸ್ಪರ್ಧೆಯಲ್ಲಿ 4 ತಂಡಗಳು, ಪುರುಷರ ಕಬಡ್ಡಿ ಸ್ಪರ್ಧೆಯಲ್ಲಿ 14 ತಂಡಗಳು ಹಾಗೂ ಪುರುಷರ ವ್ವಾಲೀಬಾಲ್ ಸ್ಪರ್ಧೆಯಲ್ಲಿ 16 ತಂಡಗಳು ಭಾಗವಹಿಸಿದ್ದವು, ಒಟ್ಟು ಸ್ಪರ್ಧೆಗಳಲ್ಲಿ ಸುಮಾರು 350 ಕ್ರೀಡಾಪಟುಗಳು ಭಾಗವಹಿಸಿದ್ದರು. ವಿಜೇತರಾದವರಿಗೆ ಬಹುಮಾನ ಮತ್ತು ನಗದು ಹಣವನ್ನು (ಪ್ರಥಮ ರೂ.7000/– ದ್ವಿತೀಯ ರೂ.5000/– ತೃತಿಯ ರೂ.3000/–) ನೀಡಲಾಯಿತು.

## ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ 161ನೇ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಅಭಿಯಂತರರ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ 161ನೇ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಅಭಿಯಂತರರ ದಿನಾಚರಣೆಯನ್ನು ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ಆಚರಿಸಲಾಯಿತು. ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕುಲಪತಿಗಳಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ, ವಿತ್ತಾಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ., ಎಸ್. ವಿ. ಬುಗಟಿ, ಕಾರ್ಯಪಾಲಕ ಅಭಿಯಂತರರು ಹಾಗೂ ಇಂಜೀನಿಯರಿಂಗ್ ವಿಭಾಗದ ಸಿಬ್ಬಂದಿಗಳು ಮತ್ತು ವಿಶ್ವವಿದ್ಯಾಲಯದ ಇತರ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ "ಫಿಟ್ ಇಂಡಿಯಾ ಫ್ರೀಡಂ ರನ್ 2.0

ನೆಹರು ಯುವ ಕೇಂದ್ರ ಗದಗ, ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯ ಹಾಗೂ ಎನ್.ಎಸ್.ಎಸ್. ಕೋಶ ಇವರುಗಳ ಸಹಯೋಗದಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ "ಫಿಟ್ ಇಂಡಿಯಾ ಫ್ರೀಡಂ ರನ್ 2.0 ವನ್ನು ದಿನಾಂಕ 18.09.2021 ರ ಮುಂಜಾನೆ 8.00 ಗಂಟೆಗೆ ಆಯೋಜಿಸಲಾಗಿತ್ತು.

ಅದರಂತೆ ಈ ಫಿಟ್ ಇಂಡಿಯ ಫ್ರೀಡಂ ರನ್ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ರೈತ ಭವನದಿಂದ ಪ್ರಾರಂಭವಾಗಿ ಗಾಂಧಿ ಸರ್ಕಲ್‌ನಿಂದ, ಜವಳಿ ಬಜಾರ್ ಹಾಗೂ ಮುಳಗುಂದ ನಾಕಾ ಮಾರ್ಗವಾಗಿ ಪುನಃ ವಿಶ್ವವಿದ್ಯಾಲಯದ ರೈತ ಭವನ ಆವರಣದಲ್ಲಿ ಮುಕ್ತಾಯವಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಂದರೇಶ್ ಬಾಬು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ರವರು ನೆರವೇರಿಸಿದರು. ಶ್ರೀ ಭರತ ಎಸ್. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಶ್ರೀದೇವಿ ವಿಶ್ವನಾಥ್, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳು

- ಎಂ.ಬಿ.ಎ. (ಗ್ರಾಮೀಣ ನಿರ್ವಹಣೆ / ಕೃಷಿ ವ್ಯವಹಾರ ನಿರ್ವಹಣೆ)
- ಎಂ.ಎ. (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ / ಸಹಕಾರ ನಿರ್ವಹಣೆ)
- ಎಂ.ಎ. (ಸಾರ್ವಜನಿಕ ಆಡಳಿತ)
- ಎಂ.ಎ. ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ)
- ಎಂ.ಎಸ್ಸಿ. (ಜಿಯೋಇನ್‌ಫಾರ್‌ಮೆಟಿಕ್ಸ್)
- ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ)
- ಎಂ.ಎಸ್ಸಿ. ಗಣಕ ವಿಜ್ಞಾನ (ದತ್ತಾಂಶ ವಿಶ್ಲೇಷಣೆ)
- ಎಂ.ಎಸ್.ಡಬ್ಲ್ಯು. (ಸಮುದಾಯ ಅಭಿವೃದ್ಧಿ / ಸಮುದಾಯ ಆರೋಗ್ಯ)
- ಎಂ.ಪಿ.ಎಚ್. (ಸಾರ್ವಜನಿಕ ಆರೋಗ್ಯ)
- ಎಂ.ಕಾಂ. (ಉದ್ಯಮಶೀಲತೆ / ಸಹಕಾರ ನಿರ್ವಹಣೆ)


## ವಿಶ್ವವಿದ್ಯಾಲಯದ ನಾಲ್ಕು ವರ್ಷದ ಗೌರವ ಪದವಿಗಳು

- ಬಿ.ಎ. ಗ್ರಾಮೀಣಾಭಿವೃದ್ಧಿ ಹಾಗೂ ಆಡಳಿತ
- ಬಿ.ಎಸ್ಸಿ. ಸಾರ್ವಜನಿಕ ಆರೋಗ್ಯ ಹಾಗೂ ಸಮಾಜ ಕಾರ್ಯ
- ಬಿ.ಎಸ್ಸಿ. ಕೃಷಿ ವ್ಯವಹಾರ ಹಾಗೂ ಆಹಾರ ಸಂಸ್ಕರಣೆ
- ಬಿ.ಎಸ್ಸಿ. ಜಿಯೋಇನ್‌ಫಾರ್‌ಮೆಟಿಕ್ಸ್ ಹಾಗೂ ಗಣಕ ವಿಜ್ಞಾನ
- ಬಿ.ಕಾಂ. ಇನೋವೇಷನ್ ಹಾಗೂ ಸ್ಟಾರ್ಟ್‌ಪ್ಸ್

## ಗೌರವ ಪದವಿಯ ವಿಶೇಷತೆಗಳು

- ಬಹುಶಿಸ್ತೀಯ, ಬಹುಹಂತದ ಪ್ರವೇಶ ಮತ್ತು ನಿರ್ಗಮನ ಅವಕಾಶಗಳುಳ್ಳ ನಾಲ್ಕು ವರ್ಷದ ಗೌರವ ಪದವಿ ಕಾರ್ಯಕ್ರಮಗಳನ್ನು ರಾಷ್ಟ್ರಿಯ ಶಿಕ್ಷಣ ನೀತಿ, 2020, ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ವಯ ರೂಪಿಸಲಾಗಿದೆ.
- ಗೌರವ ಪದವಿ ಕಾರ್ಯಕ್ರಮಗಳಲ್ಲಿ ಒಂದನೆಯ ವರ್ಷ ಪೂರ್ಣಗೊಳಿಸಿದರೆ ಸರ್ಟಿಫಿಕೇಟ್, ಎರಡನೆಯ ವರ್ಷ ಡಿಪ್ಲೋಮಾ, ಮೂರನೇಯ ವರ್ಷ ಪದವಿ ಮತ್ತು ನಾಲ್ಕನೆಯ ವರ್ಷ ಗೌರವ (ಸಂಶೋಧನೆ) ಪದವಿಯನ್ನು ಪಡೆಯಬಹುದು.
- ಸ್ಥಳೀಯ ಭಾಷೆ ಮತ್ತು ದೇಶಿ ಜ್ಞಾನ ಕೇಂದ್ರಿತ ಶಿಕ್ಷಣ.
- ಸೇವಾಧಾರಿತ ಕಲಿಕೆ, ಯೋಜನಾಧಾರಿತ ಕಲಿಕೆ ಮತ್ತು ತಂತ್ರಜ್ಞಾನದ ಏಕೀಕರಣಕ್ಕೆ ಕಾರ್ಯಕ್ರಮಗಳಲ್ಲಿ ಒತ್ತು ನೀಡಲಾಗಿದೆ.
- ಕೌಶಲ್ಯಾಧಾರಿತ, ಉದ್ಯೋಗಾಧಾರಿತ ಮತ್ತು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ದಿದಾಯಕ ಶಿಕ್ಷಣ.

## ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



ಭಾರತದ ಭವಿಷ್ಯವು ಹಳ್ಳಿಗಳಲ್ಲಿ ಅಡಗಿದೆ

- ಮಹಾತ್ಮಾ ಗಾಂಧೀ




**ವಿಶ್ವವಿದ್ಯಾಲಯದ ಕಛೇರಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ

ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582101, ಕರ್ನಾಟಕ, ಭಾರತ

(ಪ್ರಾದೇಶಿಕ ಕಛೇರಿ : ಗ್ರಾಮೀಣಾಭಿವೃದ್ಧಿ ಭವನ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು)

ಮೊ : (08372) 297214 ವೆಬ್‌ಸೈಟ್ : www.ksrdpru.ac.in